# ಅನಂತಪಥ

ANANTHKUMAR PRATISHTHANA



ಪುಟ 9
ವ್ಯಕ್ತಿ ವಿಶೇಷ ಮಾಲಿಕೆ
ಮಹಾರಾಜ ರಣಜಿತ್ ಸಿಂಗ್





ಸಂಪುಟ - 6 ಫೆಬ್ರವರಿ- 2026 ಸಂಚಿಕೆ - 68


## ಸಂಸತ್ತಿನ ಸಂವಾದ ಸಂಸ್ಕೃತಿ – ಅನಂತಕುಮಾರ್ ಅವರ ಆದರ್ಶ

ಭಾರತೀಯ ಪ್ರಜಾಪ್ರಭುತ್ವದ ಜೀವನಾಡಿ ಸಂಸತ್ತು. ಇದು ಕೇವಲ ಕಾನೂನು ರೂಪಿಸುವ ಕೇಂದ್ರವಲ್ಲ; ಬದಲಾಗಿ ರಾಷ್ಟ್ರದ ವಿವಿಧ ಚಿಂತನೆಗಳು ಸಂವಾದದ ಮೂಲಕ ಪರಿಪಕ್ವಗೊಳ್ಳುವ ಪವಿತ್ರ ವೇದಿಕೆ. ಭಿನ್ನಾಭಿಪ್ರಾಯಗಳು ಪ್ರಜಾಪ್ರಭುತ್ವದ ಸಹಜ ಪ್ರಕ್ರಿಯೆಯಾದರೂ, ಅವುಗಳನ್ನು ಪರಸ್ಪರ ಗೌರವ ಮತ್ತು ಸೌಹಾರ್ದಯುತ ಚರ್ಚೆಯ ಮೂಲಕ ಪರಿಹರಿಸಿಕೊಳ್ಳುವುದೇ ಅದರ ನಿಜವಾದ ಶಕ್ತಿ. ಸಂಸದೀಯ ಸಂವಾದ ಸಂಸ್ಕೃತಿಯನ್ನು ತಮ್ಮ ನಡೆ-ನುಡಿಗಳ ಮೂಲಕ ಜೀವಂತವಾಗಿಟ್ಟವರು ದಿವಂಗತ ಅನಂತಕುಮಾರ್ ಅವರು.

ಗದ್ದಲ ಮತ್ತು ಆರೋಪ-ಪ್ರತ್ಯಾರೋಪಗಳು ಸಂಸತ್ತಿನ ಘನತೆಯನ್ನು ಕುಂದಿಸದಂತೆ ಹೇಗೆ ವ್ಯವಹರಿಸಬೇಕು ಮತ್ತು ಸಮಯ ವ್ಯರ್ಥವಾಗದಂತೆ ಕಲಾಪಗಳನ್ನು ಹೇಗೆ ನಡೆಸಬೇಕು ಎಂಬುದನ್ನು ಅನಂತಕುಮಾರ್ ಅವರ ಸಂಸದೀಯ ಜೀವನದಿಂದ ಕಲಿಯಬಹುದು. ಅವರ ಸಂಸದೀಯ ಜೀವನವನ್ನು ಮೆಲುಕು ಹಾಕಿದಾಗ, 'ಸಂವಾದವೇ ಪ್ರಜಾಪ್ರಭುತ್ವದ ಜೀವಾಳ' ಎಂಬ ಸತ್ಯ ದೃಢವಾಗುತ್ತದೆ. ಅವರ ತರ್ಕದಲ್ಲಿ ತೀಕ್ಷ್ಣತೆ ಇರುತ್ತಿತ್ತೇ ಹೊರತು ಭಾಷೆಯಲ್ಲಿ ಕಟುತ್ವವಿರಲಿಲ್ಲ. ಸೈದ್ಧಾಂತಿಕವಾಗಿ ವಿರೋಧ ಪಕ್ಷಗಳೊಂದಿಗೆ ತೀವ್ರ ವಾಗ್ವಾದ ನಡೆಸಿದರೂ, ಅದನ್ನು ಎಂದಿಗೂ ವೈಯಕ್ತಿಕ ದ್ವೇಷಕ್ಕೆ ಹದಗೆಡಲು ಬಿಡಲಿಲ್ಲ. ವ್ಯಕ್ತಿಗಳಿಗಿಂತ ವಿಷಯಾಧಾರಿತ ಚರ್ಚೆಗೆ ಅವರು ನೀಡುತ್ತಿದ್ದ ಆದ್ಯತೆಯೇ ಅವರನ್ನು ಎಲ್ಲ ಪಕ್ಷಗಳ ನಾಯಕರೂ ಗೌರವಿಸುವ 'ಅಜಾತಶತ್ರು'ವನ್ನಾಗಿ ಮಾಡಿತು

### ಸಮನ್ವಯ ರಾಜಕಾರಣ ಮತ್ತು ಸಂಸದೀಯ ಮುತ್ಸದ್ದಿತನ

ಸಂಸದೀಯ ವ್ಯವಹಾರಗಳ ಸಚಿವರಾಗಿ ಅವರ ಕಾರ್ಯವೈಖರಿ ಅನನ್ಯವಾದುದು. ಕೇವಲ ಕಲಾಪಗಳನ್ನು ನಡೆಸುವುದು ಅವರ ಗುರಿಯಾಗಿರಲಿಲ್ಲ; ಸಂಸತ್ತಿನ ಪ್ರತಿ ನಿಮಿಷವೂ ರಾಷ್ಟ್ರದ ಹಿತಕ್ಕಾಗಿ ಬಳಕೆಯಾಗಬೇಕೆಂಬುದು ಅವರ ಹಂಬಲವಾಗಿತ್ತು. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಜಿಎಸ್‌ಟಿ (GST) ಮಸೂದೆಯ ಅಂಗೀಕಾರ. ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಗಟ್ಟಿಯಾದ ಸೇತುವೆಯಾಗಿ ಕಾರ್ಯನಿರ್ವಹಿಸಿದ ಅವರು, ಪಕ್ಷ ರಾಜಕಾರಣಕ್ಕಿಂತ 'ರಾಷ್ಟ್ರದ ಹಿತವೇ ಸರ್ವೋಚ್ಚ' ಎಂಬ ಸಂದೇಶವನ್ನು ಸಾರಿದರು. ಈ ರೀತಿಯ ಸಮನ್ವಯ ರಾಜಕಾರಣವೇ ನಿಜವಾದ ಪ್ರಜಾಸತ್ತಾತ್ಮಕ ಶಕ್ತಿ ಎಂಬುದನ್ನು ಅವರು ಸಾಬೀತುಪಡಿಸಿದರು.



### ಅನಾರೋಗ್ಯದ ನಡುವೆಯೂ ಅಪ್ರತಿಮ ಕರ್ತವ್ಯನಿಷ್ಠೆ

ಅನಂತಕುಮಾರ್ ಅವರ ಕೊನೆಯ ದಿನಗಳ ಹೋರಾಟ ಸ್ಮರಣೀಯವಾದುದು. 2018ರ ಮಾನ್ಸೂನ್ ಅಧಿವೇಶನ ಆರಂಭವಾಗುವ ಮುನ್ನವೇ ತಾವು ನಾಲ್ಕನೇ ಹಂತದ ಕ್ಯಾನ್ಸರ್ ಕಾಯಿಲೆಗೆ ತುತ್ತಾಗಿರುವುದು ದೃಢಪಟ್ಟಿದ್ದರೂ ಅವರು ಎದೆಗುಂದಲಿಲ್ಲ. ತಮ್ಮ ಜೀವಿತದ ಕೊನೆ ಸಮೀಪಿಸುತ್ತಿದೆ ಎಂಬ ಅರಿವಿದ್ದರೂ, ಆ ಅಧಿವೇಶನದಲ್ಲಿ ಅವರು ತೋರಿದ ಶ್ರದ್ಧೆ ಅಸಾಮಾನ್ಯವಾದುದು.


ಪುಟ 4 ರಲ್ಲಿ ಮುಂದುವರಿದಿದೆ


## ಯುವ ರಾಯಭಾರಿ ಈ ಶೈಕ್ಷಣಿಕ ವರ್ಷದ ಶಿಬಿರ ಸಂಪನ್ನ
## ತ್ಯಾಜ್ಯಕ್ಕೆ ಜೀವ ನೀಡಲು ಯುವ ರಾಯಭಾರಿಗಳು ಬದ್ಧ



ಈ ಬಾರಿಯ ಯುವ ರಾಯಭಾರಿ ಕಾರ್ಯಕ್ರಮವು ದಿನಾಂಕ 07-02-2026 ರಂದು ಅದಮ್ಯ ಚೇತನದ ಸಭಾಂಗಣದಲ್ಲಿ ಯಶಸ್ವಿಯಾಗಿ ಜರುಗಿತು. ಅದಮ್ಯ ಚೇತನದ ಬೃಹತ್ ಅಡುಗೆಮನೆಯನ್ನು ಕಂಡಾಗ ಮಕ್ಕಳಿಗಷ್ಟೇ ಅಲ್ಲದೆ ದೊಡ್ಡವರಿಗೂ ಅಚ್ಚರಿ, ಸಂಭ್ರಮ ಹಾಗೂ ಅಭಿಮಾನ ಮೂಡುವುದು ಸಹಜ. ಅಂತಹ ಈ ಅನ್ನಪೂರ್ಣೆಯ ಪುಣ್ಯಕ್ಷೇತ್ರದಲ್ಲಿ, ೨೦೨೫-೨೦೨೬ರ ಶೈಕ್ಷಣಿಕ ವರ್ಷದ ಕೊನೆಯ ಯುವ ರಾಯಭಾರಿ ಕಾರ್ಯಕ್ರಮ ನಡೆದದ್ದು ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ಮಕ್ಕಳಿಗೆ ಪರಿಸರ ಸಂರಕ್ಷಣೆ ಹಾಗೂ ಶೂನ್ಯ ತ್ಯಾಜ್ಯ ನಿರ್ವಹಣೆಯ ಬಗ್ಗೆ ಮನವರಿಕೆ ಮಾಡಿಕೊಡಲಾಯಿತು. ಅಡುಗೆಮನೆಯ ಹಸಿ ಕಸವನ್ನು ಬಿಸಾಕದೇ ಅದರಿಂದ ಉಪಯುಕ್ತ ಗೊಬ್ಬರ ತಯಾರಿಸುವ ವಿಧಾನವನ್ನು ಅದಮ್ಯ ಚೇತನದ 'ಡೈಲಿ ಡಂಪ್' ಕಾಂಪೋಸ್ಟರ್‌ಗಳ ಮೂಲಕ ಪ್ರಾಯೋಗಿಕವಾಗಿ ವಿವರಿಸಲಾಯಿತು. ತಾವು ಕಲಿತ ಈ ಪರಿಸರಸ್ನೇಹಿ ಪಾಠಗಳನ್ನು ಪಾಲಕರು ಮತ್ತು ಶಿಕ್ಷಕರಿಗೂ ತಿಳಿಸಿ, ಸಮಾಜದಲ್ಲಿ ಜಾಗೃತಿ ಮೂಡಿಸುವಂತೆ ಮಕ್ಕಳಿಗೆ ಈ ಸಂದರ್ಭದಲ್ಲಿ ಕರೆ ನೀಡಲಾಯಿತು.

ಮಧ್ಯಾಹ್ನ 1.30ಕ್ಕೆ ಶಿಬಿರದ ಉಪನ್ಯಾಸ ಹಾಗೂ ಸಂವಾದ ಅವಧಿ ಶುರುವಾಯಿತು. ಶಿಬಿರದ ಸಂಚಾಲಕರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಆರಂಭದಲ್ಲಿ ಅವರು ಹಿಂದಿನ ಶಿಬಿರಗಳಲ್ಲಿ ತಿಳಿಸಿದ ವಿಷಯಗಳನ್ನು ನೆನಪಿಸಿ, ಅವುಗಳನ್ನು ಅರಿತುಕೊಂಡು ಅಳವಡಿಸಿರುವ ಕುರಿತು ವಿದ್ಯಾರ್ಥಿಗಳಿಂದ ಮಾಹಿತಿ ಪಡೆದರು. ಪ್ಲಾಸ್ಟಿಕ್ ಕವರ್‌ಗಳನ್ನು ಸರಿಯಾಗಿ ಕತ್ತರಿಸುವ ವಿಧಾನ, ಒಬ್ಬ ಮನುಷ್ಯನಿಗೆ ಕನಿಷ್ಠ 7 ಮರಗಳು ಅಗತ್ಯವಾಗಿರುವುದು ಮತ್ತು ಅದಕ್ಕೆ ಪೂರಕವಾದ ಪ್ರಯತ್ನಗಳು ಹಾಗೂ ಮರಗಳನ್ನು ಗುರುತಿಸುವ ಬಗ್ಗೆ ಚರ್ಚಿಸಿದರು. ಅದರೊಂದಿಗೆ ಪೇಪರ್ ಕಪ್ ಬಳಕೆಯಿಂದಾಗುವ ದುಷ್ಪರಿಣಾಮಗಳನ್ನು ಅರಿತು ನಿತ್ಯ ಜೀವನದಲ್ಲಿ ಅವುಗಳನ್ನು ಹೇಗೆ ಅಳವಡಿಸಿಕೊಳ್ಳಲಾಗಿದೆ ಎಂಬ ಮಾಹಿತಿಯನ್ನು ಮಕ್ಕಳಿಂದ ಪಡೆದರು


ಪುಟ 4 ರಲ್ಲಿ ಮುಂದುವರಿದಿದೆ



ಚಿಣ್ಣರ ಚೇತನ
ಮಕ್ಕಳಿಗಾಗಿ ರೂಪಿತವಾದ ವಿಶೇಷ ಪುಟಗಳು
ಪ್ರಕಾಶಕರು:
ಶ್ರೀಮತಿ ತೇಜಸ್ವಿನಿ ಅನಂತಕುಮಾರ್
ಅಧ್ಯಕ್ಷರು, ಅದಮ್ಯ ಚೇತನ

# ಮನೆಯೊಳಗೂ ಬೆಳೆಯಬಲ್ಲ ಔಷಧೀಯ ಸಸ್ಯಗಳು:




ನೀವು 'ಪರಿಸರ ಪ್ರೇಮಿ'ಎನ್ನಿಸಿಕೊಳ್ಳಲು ಬಯಸುತ್ತೀರಾ? ಕೆರೆ ಸ್ವಚ್ಛ ಮಾಡೋಕೆ, ಅರಣ್ಯ ಬೆಳೆಸೋಕೆ, ಪಕ್ಷಿಗಳ ರಕ್ಷಣೆ ಮಾಡೋಕೆ, ವಾಹನ ಮಾಲಿನ್ಯವನ್ನ ತಡೆಯೋಕೆ ಎಳೇ ವಯಸ್ಸಿನಲ್ಲಿ ಸಾಧ್ಯವಿಲ್ಲ. ಮುಂದೆಂದೋ ಮಾಡಬಹುದು. ಆದರೆ ಸದ್ಯಕ್ಕೆ ನಿಮ್ಮ ಪರಿಸರ ಪ್ರೇಮವನ್ನು ಮನೆಯಲ್ಲೇ ತೋರಿಸಬಹುದು. ಸ್ವಲ್ಪ ಆಸಕ್ತಿ ವಹಿಸಿದರೆ ಮನೆಯಲ್ಲಿ ಅಥವಾ ಚಿಕ್ಕ ಅಂಗಳದಲ್ಲಿ ಕೂಡ ಸಸ್ಯಗಳನ್ನು ಬೆಳೆಸಬಹುದು. ಅದರಿಂದ ಮನೆಯ ಒಳಗಿನ ಗಾಳಿ ಶುದ್ಧವಾಗಿರುತ್ತದೆ; ಅಂಗಳದಲ್ಲಿ ಹೂಗಳು ಅರಳಿದರೆ ಜೇನ್ನೊಣ, ದುಂಬಿಗಳು ಬರುತ್ತವೆ, ಅಲ್ಲಿ ಏನೆಲ್ಲ ನಾಟಕ ನಮ್ಮ ಕಣ್ಣೆದುರೇ ನಡೆಯುತ್ತದೆ.

ಮನೆಯಲ್ಲಿ ಏನೇನನ್ನು ಬೆಳೆಯಬಹುದು ಎಂದು ಕೇಳಿದರೆ ಏನೆಲ್ಲವನ್ನೂ ಬೆಳೆಯಬಹುದು. ಆದರೆ ಮೊದಲಿಗೆ ಚಿಕ್ಕಪುಟ್ಟ ಔಷಧೀಯ ಸಸ್ಯಗಳನ್ನು ಬೆಳೆಸಲು ನೋಡಿ. ತುಳಸಿ, ದೊಡ್ಡಪತ್ರೆ, ಕೊತ್ತುಂಬರಿ, ಸೌಂಪ್, ಪುದಿನಾ, ಕರಿಬೇವು, ಶುಂಠಿ, ಅರಿಶಿಣ, ಲೋಳೆಸರ (ಅಲೊವೆರಾ), ಮೆಂತ್ಯ, ನಿಂಬೆಹುಲ್ಲು ಎಲ್ಲವೂ ನಮ್ಮ ಆರೋಗ್ಯಕ್ಕೆ ಬೇಕಾಗಿರುವ ಸಸ್ಯಗಳೇ. ಅವುಗಳನ್ನು ಬೆಳೆಯಲು ದೊಡ್ಡ ದೊಡ್ಡ ದುಬಾರಿ ಕುಂಡಗಳೇ ಬೇಕೆಂದಿಲ್ಲ.ಪುಟ್ಟ ಪುಟ್ಟ ಮಡಕೆಗಳು, ಹಳೇ ಬಾಟಲಿ ಅಥವಾ ಒಡೆದ ಬಕೆಟ್‌ಗಳನ್ನೂ ಬಳಸಬಹುದು. ತೆಂಗಿನ ಚಿಪ್ಪಿನಲ್ಲಿ ಅಥವಾ ಬಳಸಿ ಬಿಸಾಕುವ ಪೇಪರ್ ಕಪ್‌ನಲ್ಲೂ ಕೊತ್ತುಂಬರಿ ಸಸ್ಯಗಳನ್ನು ಬೆಳೆಸಬಹುದು.

ಪುದಿನಾ ಬೆಳೆಸುವುದಂತೂ ತೀರ ಸುಲಭ. ಮನೆಗೆ ತಂದಿದ್ದ ಪುದಿನಾದ ಎಲೆಗಳನ್ನೆಲ್ಲ ಅಡುಗೆಗೆ ಬಳಸಿದ ನಂತರ ಉಳಿದ ಕಡ್ಡಿಯನ್ನೇ ನೀರಲ್ಲಿಟ್ಟರೆ ಅದು ಮತ್ತೆ ಬೇರು ಬಿಟ್ಟು ಚಿಗುರುತ್ತದೆ. ಮನೆಯೇ ಪ್ರಯೋಗಶಾಲೆಯಾಗಿ ನೀವು ಈ ಸಸ್ಯಗಳ ಬಗ್ಗೆ ಅದೆಷ್ಟೊಂದು ಪಾಠಗಳನ್ನು ಕಲಿಯಬಹುದು. ಯಾವ ಸಸ್ಯಕ್ಕೆ ಕಡಿಮೆ ನೀರು ಸಾಕು, ಯಾವುದಕ್ಕೆ ಜಾಸ್ತಿ ಬೇಕು, ಯಾವುದನ್ನು ಬೇರಿನಿಂದಲೇ ಚಿಗುರಿಸಬಹುದು, ಯಾವುದು ಬೀಜದಿಂದ ಮಾತ್ರ ಚಿಗುರುತ್ತದೆ ಇತ್ಯಾದಿ ಮಾಹಿತಿಗಳೆಲ್ಲ ನಿಮಗೆ ಪಠ್ಯಪುಸ್ತಕದಲ್ಲಿ ಸಿಗದಿದ್ದರೂ ಇಲ್ಲಿ ಸಿಗುತ್ತದೆ.

ನಿಮ್ಮ ಸಮೀಪದ ನರ್ಸರಿಗಳಿಗೆ ಒಮ್ಮೆ ಹಿರಿಯರೊಂದಿಗೆ ಹೋದರೆ ಇಲ್ಲಿ ಹೆಸರಿಸಿದ ಎಲ್ಲ ಸಸ್ಯಗಳೂ ಸಿಗುತ್ತವೆ. ಕೆಮ್ಮು, ಕಫ, ಅಜೀರ್ಣ ಮುಂತಾದ ಚಿಕ್ಕಪುಟ್ಟ ಕಾಯಿಲೆಗಳಿಗೆ ಶುಂಠಿ, ತುಳಸಿ, ಅರಿಶಿಣ, ಪುದಿನಾ ಇವೆಲ್ಲ ಕಷಾಯದ ರೂಪದಲ್ಲಿ ಅತ್ಯುತ್ತಮ ಮನೆಮದ್ದು ಆಗಬಹುದು. ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ಅಂಥ ಸಸ್ಯಗಳನ್ನು ಔಷಧವಾಗಿ ಬಳಸುವ ಆಯುರ್ವೇದ ಪರಂಪರೆಯೇ ಇದೆ. ಎಲ್ಲದಕ್ಕೂ ಡಾಕ್ಟರ್ ಬಳಿಯೇ ಹೋಗಬೇಕಾಗಿಲ್ಲ. ಆ ಜ್ಞಾನ ಎಳೆಯ ತಲೆಮಾರಿಗೂ ಬರಬೇಕೆಂದರೆ ಮನೆಯಲ್ಲೇ ಪ್ರಾತ್ಯಕ್ಷಿಕೆ ಸಾಧ್ಯವಿದೆ.

## ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್


# ಅನಂತ ಸ್ನೇಹ - ಸಂಘಟನೆ : ರಾಷ್ಟ್ರಭಕ್ತಿ-ಛಾತ್ರ ಶಕ್ತಿ

ಅನಂತಕುಮಾರ್ ಅವರು ಅತ್ಯುತ್ತಮ ವಾಗ್ಮಿಯಾಗಿದ್ದರು. ವಿದ್ಯಾರ್ಥಿ ಪರಿಷತ್ತಿನ ಕಾರ್ಯಕ್ರಮಗಳು ಎಲ್ಲೇ ಆಯೋಜನೆಯಾಗಲಿ, ಅವರು ವೇದಿಕೆಗೆ ಮೇಲೆ ನಿಂತು ಸ್ಪಷ್ಟತೆ ಮತ್ತು ದೃಢ ವಿಶ್ವಾಸದೊಂದಿಗೆ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದರು . ನಾಯಕತ್ವದ ತುಡಿತಕ್ಕಿಂತ ಅನಂತಕುಮಾರರ ಈ ವಾಕ್ಚಾತುರ್ಯದ ಗುಣವೇ ಅವರನ್ನು ಉತ್ತಮ ನಾಯಕತ್ವದ ಕಡೆಗೆ ಬೆಳೆಯಲು ಪೋಷಕವಾಯಿತು. ಅನಂತಕುಮಾರರಲ್ಲಿ ಈ ಗುಣವನ್ನು ಗುರುತಿಸಿ ಸೂಕ್ತ ಅವಕಾಶಗಳನ್ನು ಕಲ್ಪಿಸಿಕೊಟ್ಟು ಮುನ್ನಡೆಯಲು ಕಾರಣರಾದ ಯಶಸ್ಸು ಹುಬ್ಬಳ್ಳಿಯ ಸಂಘಟನೆಯ ಮಿತ್ರರಿಗೇ ಸಲ್ಲತಕ್ಕದ್ದು.

ಸಮಾಜದ ಎಲ್ಲ ವರ್ಗಗಳ ಜನರನ್ನು ಒಳಗೊಂಡಂತೆ ಪರಿಷತ್ತಿನ ಚಟುವಟಿಕೆಗಳು ಮುಂದುವರಿಯಬೇಕು ಎಂಬ ಸರ್ವಸ್ಪರ್ಶಿ ಪರಿಕಲ್ಪನೆಯನ್ನೂ ಅಳವಡಿಸಿಕೊಳ್ಳಲು ಹುಬ್ಬಳ್ಳಿಯ ಮಿತ್ರರು ಮುಂದಾದರು. ಎಲ್ಲ ವರ್ಗದ ವಿದ್ಯಾರ್ಥಿನಿಲಯಗಳಿಗೆ ಭೇಟಿಕೊಟ್ಟು ಅವರೊಡನೆ ಸಂವಾದ ನಡೆಸಿ, ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸುವುದು, ಈ ಮಾರ್ಗದ ಒಂದು ಪ್ರಮುಖ ಹೆಜ್ಜೆಯಾಗಿದ್ದಿತು. ಬರಿಯ ವಿದ್ಯಾರ್ಥಿ ಪರಿಷತ್ತಿನ ಹೆಸರು ಹೇಳಿಕೊಂಡು ಹೊರಟರೆ ಹಲವು ಗುಂಪುಗಳಲ್ಲಿ ತಮ್ಮದೂ ಒಂದು ಪ್ರತ್ಯೇಕ ವಾಣಿಯಾಗುತ್ತದೆ ಎಂಬುದನ್ನು ಅರಿತ ಈ ಗೆಳೆಯರು ವಿವಿಧ ಕಾಲೇಜುಗಳ ವಿದ್ಯಾರ್ಥಿಮುಖಂಡರನ್ನೆಲ್ಲ ಸೇರಿಸಿ ವಿದ್ಯಾರ್ಥಿ ಕ್ರಿಯಾಸಮಿತಿಯೊಂದನ್ನು ರೂಪಿಸುವಲ್ಲಿ ಯಶಸ್ವಿಯಾದರು. ಪರಿಷತ್ತಿನ ಹೆಸರು ಹೇಳದೆಯೇ, ಈ ಸಮಿತಿ ಇಡಿಯ ವಿದ್ಯಾರ್ಥಿಸಮುದಾಯದ ಸಮಸ್ಯೆಗಳ ನಿವಾರಣೆಗೆ ಯೋಜನೆ ಹಾಕಿಕೊಂಡು ಕಾರ್ಯಗತಗೊಳಿಸುವ ಉದ್ದೇಶಹೊಂದಿದ್ದಿತು. ಈ ಸಮಿತಿಗೆ ಒಳ್ಳೆಯ ಮಾತುಗಾರನಾದ ಅನಂತಕುಮಾರರನ್ನೇ ಕಾರ್ಯದರ್ಶಿಯಾಗಿ ನೇಮಿಸಿದ್ದು ಗಮನಾರ್ಹ. ಪರಿಷತ್ತಿನ ಇತರ ಗೆಳೆಯರೂ ಅನಂತಕುಮಾರರ ಬೆನ್ನಿಗಿದ್ದು ಎಲ್ಲ ವಿದ್ಯಾರ್ಥಿಗಳ ಸ್ನೇಹಸಂಪರ್ಕ ಸಾಧಿಸಲು, ಆಯಾ ಶಿಕ್ಷಣಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಎದುರಿಸಬೇಕಾಗಿದ್ದ ಅನನುಕೂಲಗಳನ್ನು ನಿವಾರಿಸಲು ಸಕ್ರಿಯವಾಗಿ ತೊಡಗಿಕೊಂಡರು.


ಹೋರಾಟ ಮತ್ತು ಸಂಘಟನೆಗಳಲ್ಲದೆ ಹುಬ್ಬಳ್ಳಿಯ ವಿದ್ಯಾರ್ಥಿ ಪರಿಷತ್ತು ರಚನಾತ್ಮಕ ಕಾರ್ಯಗಳಲ್ಲೂ ಪರಿಣಾಮಕಾರಿಯಾಗಿ ತೊಡಗಿಕೊಂಡಿತ್ತು. ಇವೆಲ್ಲ ಕಾರ್ಯಕ್ರಮಗಳಲ್ಲಿ 'ಪಂಚಪಾಂಡವ'ರೂ ಸಕ್ರಿಯರಾಗಿದ್ದರೆಂದು ಬೇರೆ ಹೇಳಬೇಕಿಲ್ಲ. ವಿದ್ಯಾರ್ಥಿಗಳು ಗ್ರಾಮವಿಕಾಸ ಕಾರ್ಯದಲ್ಲಿ ಪಾಲ್ಗೊಳ್ಳಬೇಕೆಂಬ ಆದರ್ಶವನ್ನನುಸರಿಸಿ ಅಗ್ರಹಾರ ತಿಮ್ಮಸಾಗರ ಎಂಬ ಹಳ್ಳಿಯನ್ನು ದತ್ತುತೆಗೆದುಕೊಂಡರು. (ಈಗ ಸುಳ್ಯ ಮೆಡಿಕಲ್ ಕಾಲೇಜಿನಲ್ಲಿ ಉಪನ್ಯಾಸಕರಾಗಿರುವ) ಡಾ. ಮಂಟೂರರವರ ನೇತೃತ್ವದಲ್ಲಿ ನಿರಂತರವಾಗಿ ಗ್ರಾಮವಿಕಾಸ ಸಂಬಂಧಿ ಕಾರ್ಯಕ್ರಮಗಳು ನಡೆಯತೊಡಗಿದವು. 1978ರಿಂದ 1980ರವರೆಗಿನ ಮೂರು ವರ್ಷಗಳ ಅವಧಿಯಲ್ಲಂತೂ ಈ ಗ್ರಾಮವಿಕಾಸ ಕಾರ್ಯಕ್ರಮ ಬಹು ಯಶಸ್ವಿಯಾಗಿ ನಡೆಯುತ್ತಿತ್ತು. ಹುಬ್ಬಳ್ಳಿಯಿಂದ ಪ್ರತಿವಾರವೂ ಪರಿಷತ್ತಿನ ಕಾರ್ಯಕರ್ತರು ಒಂದೊಂದು ತಂಡವಾಗಿ ಗ್ರಾಮಕ್ಕೆ ತೆರಳಿ ಪ್ರಗತಿಪರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಅಲ್ಲಿ ಸಂಸ್ಕಾರಕೇಂದ್ರವೊಂದನ್ನು ಪ್ರಾರಂಭಿಸಿ ಗ್ರಾಮೀಣ ಮಕ್ಕಳಿಗೆ ಜ್ಞಾನಶಿಕ್ಷಣ ನೀಡುವ ಕಾರ್ಯವೂ ಜರುಗಿತು. ಈ ಎಲ್ಲ ಕಾರ್ಯಕ್ರಮಗಳು ಎಷ್ಟು ಪರಿಣಾಮಕಾರಿಯಾಗಿದ್ದುವೆಂದರೆ, ಈ ಗುಂಪಿನ ಕಾರ್ಯಕರ್ತರಲ್ಲೊಬ್ಬರಾಗಿದ್ದ ಡಾ. ವ್ಯಾಸ ದೇಶಪಾಂಡೆ ಎಂಬ ಯಶಸ್ವೀ ವೈದ್ಯರು ಗ್ರಾಮೀಣ ಪ್ರದೇಶದಲ್ಲೇ ನೆಲೆಸಿ ವೃತ್ತಿ ನಡೆಸುವುದಾಗಿ ಸಂಕಲ್ಪಿಸಿ ಹೆಬ್ಬಳ್ಳಿ ಎಂಬ ಗ್ರಾಮದಲ್ಲಿ ನೆಲೆಸಿಯೂ ಬಿಟ್ಟರು!

1978ರ ಸಮಯದಲ್ಲಿ ಶ್ರೀ ಗೋವಿಂದಾಚಾರ್ಯರು ಪರಿಷತ್ತಿನ ದಕ್ಷಿಣಾಂಚಲ ಕ್ಷೇತ್ರೀಯ ಸಂಘಟನಾ ಮಂತ್ರಿಯಾಗಿದ್ದರು. ಅವರು ಬಿಜಾಪುರದಲ್ಲಿ ನಡೆದ ಪ್ರಾಂತ ಅಭ್ಯಾಸ ಸಮ್ಮೇಳನವೊಂದರಲ್ಲಿ ಭಾಗವಹಿಸಿ ವಿದ್ಯಾರ್ಥಿಸಂಘಟನೆಗಳು ತಂತಮ್ಮ ಶಕ್ತಿಗನುಗುಣವಾಗಿ ಹೋರಾಟದಲ್ಲಿ ಭಾಗವಹಿಸಬಹುದಾದ ಸಾಧ್ಯತೆಗಳ ಬಗೆಗೆ ಕೆಲವು ಹೊಳಹುಗಳನ್ನು ವಿವರಿಸಿದರು. ಅವರ ವಿವರಣೆಗನುಸಾರವಾಗಿ ದಾವಣಗೆರೆ, ಶಿವಮೊಗ್ಗ, ಹುಬ್ಬಳ್ಳಿ ಮೊದಲಾದ ಕೇಂದ್ರಗಳು ವಿದ್ಯಾರ್ಥಿಹೋರಾಟವನ್ನು ಮುನ್ನಡೆಸಬಹುದಾದ 'ಶಕ್ತಿ' ಕೇಂದ್ರಗಳಾಗಿದ್ದವು. ಈ ವಿಶ್ಲೇಷಣೆ ನಡೆದ ಕಾಲಕ್ಕೇ ಸಿ.ಎಂ. ಇಬ್ರಾಹಿಂರಿಂದ ತೊಂದರೆಗೊಳಗಾದ 'ಪದ್ಮಕ್ಕ ಪ್ರಕರಣ'ವೊಂದು ಇಡೀ ರಾಜ್ಯದ ಗಮನಸೆಳೆಯುವಂತಾಯಿತು. ಆಗ ನಡೆದ ಪ್ರತಿಭಟನೆಗಳಲ್ಲಿ ವಿವಿಧ ಕೇಂದ್ರಗಳ ಶಕ್ತಿಪ್ರದರ್ಶನವೂ ಆಯಿತು. ಆಗ ಹುಬ್ಬಳ್ಳಿಯಿಂದ ನಡೆಸಿದ ಹೋರಾಟ ಅನಂತಕುಮಾರರ ನೇತೃತ್ವದಲ್ಲೇ ನಡೆದದ್ದು!




ಅಲ್ಲಿಯವರೆಗೂ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತನಾಗಿದ್ದ ಅನಂತಕುಮಾರ ಇದೀಗ ವಿದ್ಯಾರ್ಥಿಮುಖಂಡನೆನಿಸಿಕೊಂಡರು. ಈ ಹಂತಕ್ಕೆ ತಲುಪಲು ಅವರ 'ಧಾಡಸೀ' ಪ್ರವೃತ್ತಿಯೂ ಕಾರಣವೆಂದರೆ ಅತಿಶಯವಲ್ಲ. ಅನಂತಕುಮಾರ ದಾರಿಯಲ್ಲಿ ಹೋಗುವಾಗ ಕಾಲೇಜುವಿದ್ಯಾರ್ಥಿಗಳು ಅವರು ಯಾವ ಕಾಲೇಜಿನವರೇ ಆಗಿರಲಿ, ಯಾವ ಗುಂಪಿನವರೇ ಇರಲಿ, "ಅಂವಾ ಸ್ಟೂಡೆಂಟ್ ಲೀಡರ್ ಅದಾನಪಾ" ಎನ್ನುವಷ್ಟರಮಟ್ಟಿಗೆ ಗುರುತುಹತ್ತುವ ಹಾಗಾಯಿತು.

1980ರಲ್ಲಿ ಅಚ್ಯುತ ಲಿಮಯೆ ಪೂರ್ಣಾವಧಿ ಕಾರ್ಯಕರ್ತರಾಗಿ ಮಂಗಳೂರಿನತ್ತ ಹೊರಟರು. ಹುಬ್ಬಳ್ಳಿ ವಿಭಾಗದಿಂದ ಬಹುಕಾಲದ ನಂತರ ಹೀಗೊಬ್ಬರು ಪೂರ್ಣಾವಧಿ ಕಾರ್ಯಕರ್ತರಾಗಿ ಹೊರಟಿದ್ದರು. ಮುಂದೆ ಅವರು ಪ್ರಾಂತೀಯ ಕಾರ್ಯದರ್ಶಿಯೂ ಆದರು. ಆದರೆ, ಅನಂತಕುಮಾರರಿಗೆ ಪೂರ್ಣಾವಧಿ ಕಾರ್ಯಕರ್ತರಾಗುವ ಮುನ್ನವೇ ಪ್ರಾಂತೀಯ ಕಾರ್ಯದರ್ಶಿಯಾಗುವ ಅವಕಾಶ ಸಿಕ್ಕಿದ್ದು ಒಂದು ವಿಶೇಷ. ಅವರು ಈ ಗೌರವಕ್ಕೆ ಪಾತ್ರರಾಗುವ ಹೊತ್ತಿಗೆ ಇನ್ನೂ ಕಾನೂನು ವಿದ್ಯಾರ್ಥಿಯಾಗಿ ಕಾಲೇಜಿಗೆ ಹೋಗುತ್ತಿದ್ದರು!



ಕಾಲೇಜು ಓದುತ್ತಿದ್ದ ಕಾಲದಲ್ಲಿ ತುರ್ತುಪರಿಸ್ಥಿತಿಯ ಜೈಲುವಾಸದಿಂದ ಮೊದಲಾದ ಅಚ್ಯುತ-ಅನಂತರವರ ಸ್ನೇಹ ಕೊನೆಯವರೆವಿಗೂ ಅತಿ ನಿಕಟವೂ ಆತ್ಮೀಯವೂ ಆಗಿತ್ತು. ಅವರ ಸಲುಗೆಯಲ್ಲಿ ಕೃತಕತೆಯ ಇಲ್ಲವೇ ವ್ಯಾವಹಾರಿಕ ಧೋರಣೆಯ ಲವಲೇಶವೂ ಇರಲಿಲ್ಲ. ಬೈಠಕ್‌ನಲ್ಲಿ ಭಾಗವಹಿಸಲು ತನ್ನ ಮನೆಯಿಂದ ಆಟೋ ಹತ್ತಿ ಅಚ್ಯುತನ ಮನೆಗೆ ಬರುತ್ತಿದ್ದ ಅನಂತ "ಆಟೋದವನು ನಿಂತಾನ, ಅವನಿಗೆ ರೊಕ್ಕ ಕೊಟ್ಟು ಕಳಿಸು" ಎಂದು ಅಧಿಕಾರಯುತವಾಗಿ ಹೇಳುವುದನ್ನು ಅಚ್ಯುತ ಸ್ನೇಹದ ಸಲುಗೆ ಎಂದೇ ಭಾವಿಸುತ್ತಿದ್ದರು.

ಪುಟ 5 ರಲ್ಲಿ ಮುಂದುವರಿದಿದೆ

ಪುಟ 1 ರಿಂದ

## ಸಂಸತ್ತಿನ ಸಂವಾದ ಸಂಸ್ಕೃತಿ

ಆ ಅಧಿವೇಶನವು ಕಳೆದ 20 ವರ್ಷಗಳಲ್ಲೇ ಅತಿ ಹೆಚ್ಚು ಫಲಪ್ರದವಾಯಿತು ಎಂದು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಲೇಖನವೊಂದು ವರದಿ ಮಾಡಿತು. ರಾಜ್ಯಸಭೆಯ ಉಪಸಭಾಪತಿ ಸ್ಥಾನಕ್ಕೆ ನಡೆದ ಜಿದ್ದಾಜಿದ್ದಿನ ಚುನಾವಣೆಯಲ್ಲಿ ಮಿತ್ರಪಕ್ಷಗಳ ಅಭ್ಯರ್ಥಿಯನ್ನು ಗೆಲ್ಲಿಸುವಲ್ಲಿ ಅವರ ಸಂಧಾನ ಚತುರತೆ ಪ್ರಮುಖ ಪಾತ್ರ ವಹಿಸಿತು. ಈ ಅಧಿವೇಶನದಲ್ಲಿ ಲೋಕಸಭೆಯ ಶೇ. 44ರಷ್ಟು ಮತ್ತು ರಾಜ್ಯಸಭೆಯ ಶೇ. 50ರಷ್ಟು ಸಮಯವನ್ನು ಶಾಸನ ನಿರೂಪಣೆಗೆ ಬಳಸಿಕೊಳ್ಳಲಾಯಿತು. ಸುಮಾರು 4,140 ಲಿಖಿತ ಪ್ರಶ್ನೆಗಳಿಗೆ ಉತ್ತರ ದೊರೆತದ್ದು ಮತ್ತು ಸತತ ಪ್ರತಿಭಟನೆಗಳ ನಡುವೆಯೂ 112 ಗಂಟೆಗಳ ಕಾಲ ಕಲಾಪ ನಡೆಸಿದ್ದು ಅವರ ಕಾರ್ಯದಕ್ಷತೆಗೆ ಸಾಕ್ಷಿಯಾಗಿದೆ.




**ಮೃತ್ಯುವಿನ ಸಮ್ಮುಖದಲ್ಲೂ ವೃತ್ತಿಧರ್ಮ:** ಅದೇ ಸಂದರ್ಭದಲ್ಲಿ ಪಿತೃಸಮಾನರಾದ ಅಟಲ್ ಬಿಹಾರಿ ವಾಜಪೇಯಿಯವರು ನಿಧನರಾದಾಗ, ಕೇವಲ ಒಂದು ದಿನದ ಮುನ್ನವಷ್ಟೇ ತಾವು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರೂ, ವೈದ್ಯರ ಸಲಹೆಯನ್ನು ಮೀರಿದ ಅವರು ದೆಹಲಿಗೆ ತೆರಳಿ ಅಂತ್ಯಕ್ರಿಯೆಯ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಿದರು. ಜೀವನದ ಕೊನೆಯ ದಿನದವರೆಗೂ ತಮಗೆ ಪ್ರಿಯವಾಗಿದ್ದ 'ಜನೌಷಧಿ' ಯೋಜನೆಯ ಸಮೀಕ್ಷೆ ನಡೆಸುತ್ತಿದ್ದ ಅವರು, "ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್" (ಮೃತ್ಯುವು ಕೂದಲನ್ನು ಹಿಡಿದು ಎಳೆಯುತ್ತಿದ್ದರೂ ಧರ್ಮವನ್ನು ಆಚರಿಸು) ಎಂಬ ಉಕ್ತಿಗೆ ಅನ್ವರ್ಥವಾಗಿ ಬದುಕಿದರು.

ಸಂಸತ್ತಿನ ಸಂವಾದ ಸಂಸ್ಕೃತಿ ಕೇವಲ ರಾಜಕೀಯಕ್ಕೆ ಸೀಮಿತವಲ್ಲ; ಅದು ಸಮಾಜದ ನಡವಳಿಕೆಗೆ ದಿಕ್ಸೂಚಿ. ನಾಯಕರು ಗೌರವದಿಂದ ಮಾತನಾಡಿದರೆ ಸಮಾಜವೂ ಸಂಯಮವನ್ನು ರೂಢಿಸಿಕೊಳ್ಳುತ್ತದೆ. ಇಂದು ಭಾರತವು ಅಭಿವೃದ್ಧಿಯ ಪಥದಲ್ಲಿ ವೇಗವಾಗಿ ಸಾಗುತ್ತಿದೆ. ಆದರೆ ಈ ಪ್ರಗತಿಯ ಜೊತೆಗೆ ಸಹಕಾರ, ಸಂಯಮ ಮತ್ತು ಪರಸ್ಪರ ಗೌರವದ ಸಂವಾದ ಸಂಸ್ಕೃತಿಯನ್ನು ಕಾಪಾಡುವುದು ಅನಿವಾರ್ಯವಾಗಿದೆ. ಅನಂತಕುಮಾರ್ ಅವರು ಕೇವಲ ಅತ್ಯುತ್ತಮ ಸಂಸದೀಯ ಪಟು ಮಾತ್ರವಲ್ಲ, 'ರಾಷ್ಟ್ರ ಮೊದಲು' ಎಂಬ ತತ್ವವನ್ನು ಉಸಿರಾಗಿಸಿಕೊಂಡು ಬದುಕಿದ ಧೀಮಂತ ನಾಯಕ.

---

ಪುಟ 1 ರಿಂದ

## ಯುವರಾಯಭಾರಿ



ಮಕ್ಕಳು ಈ ವಿಷಯಗಳನ್ನು ತಾವು, ತಮ್ಮ ಕುಟುಂಬ, ನೆರೆಯವರು, ಸ್ನೇಹಿತರು ಶಾಲೆ, ಪಕ್ಕದ ಶಾಲೆಯಲ್ಲಿ ಈ ವಿಷಯವನ್ನು ತಿಳಿಸಿರುವುದನ್ನು ವಿವರಿಸಿದರು. ತಮ್ಮ ಪರಿಸರದಲ್ಲಿ ಇದರಿಂದ ಆದ ಬದಲಾವಣೆಯನ್ನು ಹಂಚಿಕೊಂಡರು. ಒಬ್ಬ ವಿದ್ಯಾರ್ಥಿಯು ನಂದಿನಿ ಹಾಲಿನ ಬೂತ್‌ಗೆ ಹೋಗಿ, ಅಲ್ಲಿ ಗ್ರಾಹಕರಿಗೆ ಹಾಲಿನ ಪ್ಯಾಕೆಟ್ ಕತ್ತರಿಸುವ ವಿಧಾನವನ್ನು ವಿವರಿಸಿದನು. ಮಕ್ಕಳಿಂದ ಈ ರೀತಿಯ ಕ್ರಮ ನಡೆದಿರುವುದು ಖುಷಿ ಕೊಟ್ಟಿತು.


ಕನ್ನಡದ ಖ್ಯಾತ ಆಡಳಿತಗಾರರಾದ ರಾಣಿ ಚೆನ್ನಭೈರಾದೇವಿ ಹಾಗೂ ರಾಜ ದುರ್ವಿನೀತ ಅವರ ಜೀವನ ಕಥನವನ್ನು ಮಕ್ಕಳಿಗೆ ಹೇಳಲಾಯಿತು. ಭೂಮಿ ಮತ್ತು ಮಾನವರ ಉಳಿವಿನಲ್ಲಿ ಅತ್ಯಂತ ಅವಶ್ಯಕವಾಗಿರುವ ರಾಸಾಯನಿಕರಹಿತ ಆಹಾರೋತ್ಪನ್ನಗಳನ್ನು ಪಡೆಯುವಲ್ಲಿ ಮನೆಯಲ್ಲಿಯೇ ದೇವರಿಗೆ ಹಾಕಿದ ಹೂವು, ಹಣ್ಣು-ತರಕಾರಿ ಸಿಪ್ಪೆಗಳಿಂದ ಕಾಂಪೋಸ್ಟ್ ತಯಾರಿಕೆಯ ಮಹತ್ವವನ್ನು ಮೋಹಿನಿ ಅವರು ವಿವರಿಸಿದರು. ಹೂ-ಹಣ್ಣು-ತರಕಾರಿ ತ್ಯಾಜ್ಯಕ್ಕೆ ಜೀವ ನೀಡುವ ಕುರಿತು ಅವರು ಮಕ್ಕಳಲ್ಲಿ ಅರಿವು ಮೂಡಿಸಿದರು. ಕಾಂಪೋಸ್ಟ್ ತಯಾರಿಕೆಯಿಂದ ಆಗುವ ಪ್ರಯೋಜನಗಳ ಕುರಿತ ವಿವರಿಸಿದ ಮೋಹಿನಿ ಅವರು, ಇದರಿಂದ ಭೂಮಿಯ ಮೇಲಿನ ತ್ಯಾಜ್ಯ ಕಡಿಮೆಯಾಗುತ್ತದೆ, ಮಣ್ಣು ನೈಸರ್ಗಿಕವಾಗಿ ಸಮೃದ್ಧಗೊಳ್ಳುತ್ತದೆ, ಮಿಥೇನ್ ಹೊರಸೂಸುವಿಕೆಯನ್ನು ಕಡಿಮೆ ಮಾಡುತ್ತದೆ, ಗೊಬ್ಬರ ಖರೀದಿಯ ಹಣ ಉಳಿತಾಯ, ಪರಿಸರವನ್ನು ರಕ್ಷಿಸುತ್ತದೆ, ಆರೋಗ್ಯಕರ ಆಹಾರ ಪದಾರ್ಥಗಳನ್ನು ಪಡೆಯಬಹುದು ಎಂದು ತಿಳಿಸಿದರು.

ಕಾಂಪೋಸ್ಟ್ ಮಾಡುವ ವಿಧಾನ ಸರಳ ಮತ್ತು ಸುಲಭವಾಗಿದ್ದು, ಮನೆಯಲ್ಲಿ ದೊರೆಯುವ ಹಣ್ಣು, ತರಕಾರಿ ಸಿಪ್ಪೆಗಳು, ಕಾಫಿ/ಚಹಾ ಪುಡಿ, ಒಣ ಎಲೆಗಳು, ಹುಲ್ಲು, ಮೊಟ್ಟೆಯ ಚಿಪ್ಪುಗಳನ್ನು ಬಳಸಿ ಕಾಂಪೋಸ್ಟ್ ತಯಾರಿಸಬಹುದು. ಈ ಕಾರ್ಯವು ಮನಸ್ಸಿಗೂ ಮುದ ನೀಡುತ್ತದೆ ಎಂದರು. ತಯಾರಿ ವಿಧಾನವನ್ನು ವಿವರಿಸಿದ ಮೋಹಿನಿ ಅವರು, ಅಡುಗೆ ಮನೆ/ತೋಟದ ತ್ಯಾಜ್ಯವನ್ನು ಸಂಗ್ರಹಿಸಿ ಒಣ ಎಲೆಗಳು ಮತ್ತು ಹಸಿಕಸವನ್ನು ಪದರ-ಪದರಗಳಾಗಿ ಸೇರಿಸಬೇಕು. ತರಕಾರಿ ಹೋಳು ಮತ್ತು ಕಡ್ಡಿಗಳನ್ನು ಆದಷ್ಟು ಸಣ್ಣ ಸಣ್ಣ ಮಾಡಬೇಕು. ಹೆಚ್ಚು ಹಸಿ, ಹೆಚ್ಚು ಒಣ ಇಲ್ಲದಂತೆ ನೋಡಿಕೊಳ್ಳಬೇಕು, ಆಗಾಗ ಸ್ವಲ್ಪ ಬೆಲ್ಲದ ನೀರು, ಸ್ವಲ್ಪ ಮಜ್ಜಿಗೆ ಸೇರಿ ಗಾಳಿಯಾಡಲು ನಿಯಮಿತವಾಗಿ ಕೈಯಾಡಿಸಬೇಕು. ಅದರಿಂದ ಕೆಳಗೆ ಇಳಿಯುವ ಕಪ್ಪು ನೀರಿಗೆ ಸಾದಾ ನೀರು ಬೆರೆಸಿ ಗಿಡಗಳಿಗೆ ಹಾಕಬಹುದು. 6-8 ವಾರಗಳಲ್ಲಿ ಸಮೃದ್ಧ ಕಾಂಪೋಸ್ಟ್ ಗೊಬ್ಬರ ಲಭ್ಯವಾಗುತ್ತದೆ. ಮಜ್ಜಿಗೆ ಮತ್ತು ಬೆಲ್ಲವನ್ನು ಸೇರಿಸುವುದರಿಂದ ಸೂಕ್ಷ್ಮಾಣುಜೀವಿಗಳ ಸಂಖ್ಯೆ ಹೆಚ್ಚಾಗಿ ಗೊಬ್ಬರ ತಯಾರಿಕೆಗೆ ಪೂರಕವಾಗುತ್ತದೆ, ಆಗಾಗ ಕಲಕುವುದು ಅಥವಾ ಮತ್ತು ಕಾಂಪೋಸ್ಟ್ ತಯಾರಿಕೆಯ ಡಬ್ಬಕ್ಕೆ ಪುಟ್ಟ ಕಿಂಡಿಗಳನ್ನಿಡುವುದರ ಮೂಲಕ ಗೊಬ್ಬರ ತಯಾರಿಕೆ ಸಾಧ್ಯವಾಗುವುದನ್ನು ವೈಜ್ಞಾನಿಕವಾಗಿ ಮೋಹಿನಿ ಅವರು ವಿವರಿಸಿದರು. ಈ ಬೇಸಿಗೆ ರಜೆಯಲ್ಲಿ ಕಾಂಪೋಸ್ಟ್ ತಯಾರಿಸಿ, ಮುಂದಿನ ಶಿಬಿರದಲ್ಲಿ ಅದರ ಅನುಭವಗಳನ್ನು ಹಂಚಿಕೊಳ್ಳುವುದಾಗಿ ಮಕ್ಕಳು ತಿಳಿಸಿದರು. ಎಲ್ಲ ಮಕ್ಕಳೂ ಸಂವಾದದಲ್ಲಿ ಪಾಲುಗೊಂಡದ್ದು ವಿಶೇಷವಾಗಿತ್ತು.

ಶಿಬಿರದ ಕೊನೆಯಲ್ಲಿ ಮಕ್ಕಳಿಗೆ ಶ್ರೀ ಎಚ್.ಎನ್. ಅನಂತಕುಮಾರ ಅವರ ಕುರಿತ ಕೃತಿ 'ಅನಂತಯಾನ', ಜನವರಿ ತಿಂಗಳ 'ಅನಂತಪಥ' ಪತ್ರಿಕೆಯನ್ನು ನೀಡಲಾಯಿತು. ಪರಿಸರ, ಸೇವೆ , ಸಂಸ್ಕೃತಿ, ಇತಿಹಾಸ , ಆರೋಗ್ಯ ಮತ್ತು ಸದೃಢ ರಾಷ್ಟ್ರ ನಿರ್ಮಾಣದ ಆಶಯದಲ್ಲಿ ರೂಪಿಸಲಾದ ಯುವರಾಯಭಾರಿ ಕಾರ್ಯಕ್ರಮದ ಮುಂದಿನ ಶೈಕ್ಷಣಿಕ ವರ್ಷದ ರೂಪುರೇಷೆಗಳನ್ನು ಪ್ರಮುಖ ಕಾರ್ಯಕರ್ತರ ಬೈಠಕನಲ್ಲಿ ಯೋಜೀಸಲಾಯಿತು.

ಶ್ರೀ ಅನಂತಕುಮಾರ್ ಅವರ "ಜನಸೇವೆಯ ಮೂಲಕ ರಾಷ್ಟ್ರ ಸೇವೆ" ಎಂಬ ಆದರ್ಶವನ್ನು ಮುಂದುವರೆಸುತ್ತಾ, ಈ ಉಪಕ್ರಮವು ಇಂದಿನ ಮಕ್ಕಳಲ್ಲಿ ನಾಯಕತ್ವದ ಗುಣಗಳನ್ನು ಮತ್ತು ಮೌಲ್ಯಗಳನ್ನು ತುಂಬಿ, ಬಲಿಷ್ಠ ಭಾರತದ ನಿರ್ಮಾಣಕ್ಕೆ ದಾರಿದೀಪವಾಗಲಿದೆ.

# ಟಿಬೆಟ್ಟಿನ ಪುರಾತನ ರಾಮಮಂದಿರ !




ಅದು 1999ನೇ ಇಸವಿ ಜುಲೈ ತಿಂಗಳು. ನನ್ನನೊಳಗೊಂಡಂತೆ, ಸುಮಾರು 30 ಜನ ಯಾತ್ರಿಗಳು ಭಾರತದ ವಿವಿಧ ಭಾಗಗಳಿಂದ ದೆಹಲಿಯ ಪಾರ್ಲಿಮೆಂಟ್ ಸ್ಟ್ರೀಟ್'ನಲ್ಲಿರುವ ಅಶೋಕ ಹೋಟೆಲ್ಲಿಗೆ ಬಂದಿಳಿದಿದ್ದೆವು ಸೌತ್ ಬ್ಲಾಕ್ ನಲ್ಲಿರುವ ವಿದೇಶಾಂಗ ಸಚಿವಾಲಯದ ಕಾರ್ಯಾಲಯದಲ್ಲಿರುವ ಚೀ ನಾ ಸಂ ಬಂ ಧ ಪ ಟ್ಟ ಕಾರ್ಯದರ್ಶಿಯವರನ್ನ ಭೇಟಿಯಾಗಿ, ,ಪ್ರಯಾಣಕ್ಕೆ ಬೇಕಿರುವ ಕೆಲವು ದಾಖಲೆಗಳನ್ನ ಪಡೆದುಕೊಂಡು ಕೈಲಾಶ್ ಮಾನಸ ಸರೋವರ ಯಾತ್ರೆ ಕೈಗೊಳ್ಳುವವರಿದ್ದೇವು. ನಾನು ಮೊಟ್ಟ ಮೊದಲ ಸಾರಿ ಅನಂತಕುಮಾರ್'ರವರನ್ನ ಭೇಟಿಯಾಗಿದ್ದು ಇಲ್ಲೆ. ಕರ್ನಾಟಕದಿಂದ ಎಷ್ಟು ಜನ ಇದ್ದೀರ ಎಂದು ಪ್ರಶ್ನಿಸಿದರು, ನಾನು ಒಬ್ಬನೇ ಎಂದು ಉತ್ತರಿಸಿದೆ. ಆಗ ನನಗೆ ಕೇವಲ 20 ವರ್ಷ.ಅವರು ಅಶ್ಚರ್ಯಪಟ್ಟು ಇಷ್ಟು ಚಿಕ್ಕ ವಯಸ್ಸಿಗೆ ನೀನು ಕೈಲಾಶ್ ಪರ್ವತಕ್ಕೆ ಹೋಗುತ್ತಿದ್ದೀಯ ಭೇಷ್ ಎಂದು ಬೆನ್ನು ತಟ್ಟಿದರು. ನಂತರ ತಮ್ಮ ಜೊತೆಗಿದ್ದ ದೆಹಲಿಯ ವ್ಯಕ್ತಿ ಒಬ್ಬನಿಗೆ, ಇಸ್ಕೊ ಗ್ರೇಟರ್ ಕೈಲಾಶ್'ಮೆ ಸ್ಟಿಕೇಜ್ ಕಾ ದುಕಾನ್ ಮೇ ಜಾಕೆಟ್ ದಿಲಾವೋ ಎಂದರು. ಆ ವ್ಯಕ್ತಿಯ ಜೊತೆ ಬೈಕಿನಲ್ಲಿ ಕುಳಿತು ಸವಾರಿ ಮಾಡಿದಾಗ ನನಗೇನೊ ಒಂದು ರೋಮಾಂಚನ,

ದಾರಿಯಲ್ಲಿ ಅಶೋಕಾ ರೋಡಿನಲ್ಲಿ ಇದ್ದ ಭಾ.ಜ.ಪ. ಕಾರ್ಯಾಲಯವನ್ನ ತೋರಿಸಿ - ದೇಖೊ ಏ ಹಮಾರ ಕಾರ್ಯಾಲಯ್ ಹೈ ಅಂದರು, ಮುಂಭಾಗದ ಅಂಗಳದಂತಿದ್ದ ಜಾಗ್ ಶೀಟ್ ನಲ್ಲಿ ಕವರ್ ಆಗಿದ್ದು ನೋಡಿ ನನಗೆ ಆಶ್ಚರ್ಯ ಮತ್ತು ನೋವು ಎರಡು ಆಗಿತ್ತು. ತೀರಾನೇ ಸುಮಾರಗಿದ್ದ ಕಟ್ಟಡ ಅದಾಗಿತ್ತು. ನಂತರ ಸ್ಟಿಕೇಜ್ ಅಂಗಡಿಗೆ ಬಂದೆವು, ಅಲ್ಲಿ ಸುಮಾರು 4000 ರುಪಾಯಿಯ ಜಾಕೆಟ್ ಒಂದನ್ನ ನನಗೆ ಆತ ಕೊಡಿಸಿದ, ನಂತರ ವಾಪಸ್ ದಾರಿಯಲ್ಲಿ ಐ.ಟಿ. ಬಿ.ಪಿ ಆಸ್ಪತ್ರೆಯಲ್ಲಿ ನನ್ನ ಮೆಡಿಕಲ್ ಚೆಕ್ ಅಪ್ ಮುಗಿಸಿ ಅಶೋಕಾ ಹೊಟೆಲ್ಲಿಗೆ ವಾಪಸ್ ಬಂದೆವು. ಆ ಜಾಕೆಟ್ ನನ್ನ ಕೈಲಾಶ್ ಯಾತ್ರೆಯಲ್ಲಿ ಸಾಕಷ್ಟು ಸಹಾಯ ಮಾಡಿತು, ಶ್ರೀ ಅನಂತಕುಮಾರರನ್ನ ಧನ್ಯತಾ ಭಾವನೆಯಿಂದ ನೆನಪಿಸುವಂತಿತ್ತು. ಮುರುದಿನ ಬೆಳಗ್ಗೆ ನಮ್ಮ ಬಸ್ ದೆಹಲಿಯಿಂದ ಇಂದಿನ ಉತ್ತರಾಖಂಡ್ ರಾಜ್ಯದ ಕಾತ್ಗೋಧಾಮ್'ಗೆ ಹೊರಡುವುದಿತ್ತು. ಅದನ್ನು ಫ್ಲಾಗ್ ಅಫ್ ಮಾಡಲು ಖುದ್ದು ಅಂದಿನ ಪ್ರಧಾನಿಗಳಾದ ಪ್ರಾತಸ್ಮರಣೀಯ ವಾಜಪೇಯಿಯವರು ಬಂದರು. ಅವರು ಜೊತೆ ಕೀರ್ತಿಶೇಷ ಅನಂತಕುಮಾರರು ಬಂದಿದ್ದರು.



ಆ ಸಂದರ್ಭದಲ್ಲಿ ನನಗೆ ಅತ್ಯಂತ ಉಪಯುಕ್ತ ಮತ್ತು ಕುತೂಹಲದ ಮಾಹಿತಿಯನ್ನ ಅವರು ನೀಡಿದರು. ಟಿಬೆಟ್ಟಿನ ತಕ್ಲಾಕೋಟ್ ನಗರದಿಂದ ಕೈಲಾಶ್ ಬೇಸ್ ಕ್ಯಾಂ ತಾರ್ಚೆನ್'ಗೆ ಹೋಗುವ ದಾರಿಯಲ್ಲಿ ಅತ್ಯಂತ ಪುರಾತನ ರಾಮಮಂದಿರವಿದೆ ಖಂಡಿತ ಭೇಟಿ ನೀಡು ಎಂದು ಮತ್ತು ಸಮೀಪದಲ್ಲೆ ಡೋಗ್ರಾ ವೀರ ಸೇನಾನಿ ಝೋರಾವರ್ ಸಿಂಗ್ ಸಮಾಧಿಯು ಇದೆ, ಅದನ್ನು ನೋಡಿಕೊಂಡು ಬಾ ಎಂಬ ಮಾಹಿತಿಯನ್ನ / ಸೂಚನೆಯನ್ನ ನೀಡಿದರು. ಆ ದಿನ ಅನಂತ್ ಕುಮಾರ್ ರವರು ವಾಜಪೇಯಿ'ಯವರ ಜೊತೆ ಅಂಬಾಸಿಡರ್ ಕಾರಿನಲ್ಲಿ ಬಂದು ಇಳಿದ ದೃಶ್ಯ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಲಿಪು ಲೇಕ್ ಪಾಸ್ ನಿಂದ ಟಿಬೆಟ್ಟಿಗೆ ಪ್ರವೇಶಿಸಿ ಅಂತೂ ಆ ರಾಮಮಂದಿರಕ್ಕೆ ಭೇಟಿ ನೀಡುವ ಸುಸಂದರ್ಭ ನನಗೆ ಸಿಕ್ಕಿತು. ಅತಿ ಅದ್ಭುತವಾದ ದೇವಾಲಯ ಅದಾಗಿತ್ತು ಹೊಳೆಯುವ ಬೆಳ್ಳಿ ತಟ್ಟೆಯಂತಿದ್ದ ಪ್ಲೇಟ್'ಗಳಿಂದ ಸೂರ್ಯನ ಬೆಳಕನ್ನ ಬಳಸಿ ದೇವಾಲಯವನ್ನ ಪ್ರಕಾಶಿಸಲಾಗಿತ್ತು. ಈ ರೀತಿ ನಾನು ನೋಡಿದ್ದು ಅದೇ ಮೊದಲು, ಅಲ್ಲಿ ಟಿಬೆಟಿ ಬೌದ್ಧ ಭಿಕ್ಷುಗಳು ಸದಾ ಜಪ, ಮಂತ್ರ ಪಠನಗಳು ಮಾಡುತ್ತಿದ್ದರು. ಅದು ಅವರಿಗೂ ಪವಿತ್ರ ಸ್ಥಳ. ನಂತರ ಝೋರಾವರ ಸಿಂಗ್ ಸಮಾಧಿಯನ್ನು ನೋಡಿ ಮುನ್ನಡೆದವು.

ಅಲ್ಲಿದ್ದ ಸ್ಥಳೀಯ ಗೈಡ್ ಅವರಿಗೂ ನಾನು ಈ ಎರಡು ಜಾಗಗಳ ಬಗ್ಗೆ ಕೇಳಿದಾಗ ಆಶ್ಚರ್ಯವಾಯಿತು.ಆದರೆನನಗೆಈಅಪರೂಪದಮಾಹಿತಿನೀಡಿದ್ದುಕೀರ್ತಿಶೇಷ ಅನಂತಕುಮಾರರು. ಸನಾತನ ಸಂಸ್ಕೃತಿಯ ಬಗ್ಗೆ ಮತ್ತು ಭೌಗೋಳಿಕವಾಗಿ ಮಹತ್ವವಾದ ಸ್ಥಳಗಳಬಗ್ಗೆ ಅವರಿಗಿದ್ದ ಆಳವಾದ ವಿಚಾರ ಗ್ರಹಿಕೆ , ಪ್ರಾಜ್ಞತೆ ಮತ್ತು ಸೂಕ್ತ ಸಮಯದಲ್ಲಿ ತಮ್ಮ ಸುಗ್ಞಾನದಿಂದ ಮಾರ್ಗದರ್ಶನ ಮಾಡುತ್ತಿದ್ದ ರೀತಿ, ಇವೆಲ್ಲವೂ ನನ್ನ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದ ವಿಚಾರಗಳಾಗಿವೆ. ಇವರ ಪ್ರೇಮಾಶೀರ್ವಾದಕ್ಕೆ ಪಾತ್ರರಾದ ನಾವೆಲ್ಲರು ಧನ್ಯರು.

**-ಶ್ರೀ ಸುರೇಶ್, ನೆಲಮಂಗಲ**

## ತ್ಯಾಜ್ಯಕ್ಕೆ ಜೀವ ನೀಡಿ!

**ಇಂದೇ ಕಾಂಪೋಸ್ಟ್ ತಯಾರಿಸಿ -**
**ಪ್ರಕೃತಿಯ ಮರುಬಳಕೆಯ ವಿಧಾನ ಪಾಲಿಸಿ**

ಅದಮ್ಯ ಚೇತನ
ADAMYA CHETANA
www.adamyachetana.org

**ಕಾಂಪೋಸ್ಟ್ ಏಕೆ?**

- ✓ ಭೂಮಿಯ ಮೇಲೆ ತ್ಯಾಜ್ಯ ಕಡಿಮೆ ಮಾಡುತ್ತದೆ.
- ✓ ಮಣ್ಣನ್ನು ನೈಸರ್ಗಿಕವಾಗಿ ಸಮೃದ್ಧಗೊಳಿಸುತ್ತದೆ.
- ✓ ಮೀಥೇನ್ ಹೊರಸೂಸುವಿಕೆಯನ್ನು ಕಡಿಮೆ ಮಾಡುತ್ತದೆ
- ✓ ಗೊಬ್ಬರ ಕೊಳ್ಳುವ ಹಣ ಉಳಿತಾಯವಾಗುತ್ತದೆ
- ✓ ಪರಿಸರವನ್ನು ರಕ್ಷಿಸುತ್ತದೆ

**ನೀವು ಯಾವುದನ್ನು ಕಾಂಪೋಸ್ಟ್ ಮಾಡಬಹುದು?**

- ✓ ಹಣ್ಣು ಮತ್ತು ತರಕಾರಿ ಸಿಪ್ಪೆಗಳು
- ✓ ಕಾಫಿ ಪುಡಿ ಮತ್ತು ಚಹಾ ಪುಡಿ / ಎಲೆ
- ✓ ಒಣ ಎಲೆಗಳು ಮತ್ತು ಹುಲ್ಲು
- ✓ ಮೊಟ್ಟೆಯ ಚಿಪ್ಪುಗಳು

**ಕಾಂಪೋಸ್ಟ್ ತಯಾರಿಸುವುದು ಸುಲಭ !**

ಅಡುಗೆಮನೆ ಮತ್ತು ತೋಟದ ತ್ಯಾಜ್ಯವನ್ನು ಸಂಗ್ರಹಿಸಿ | ಒಣ ಎಲೆಗಳು ಮತ್ತು ಹಸಿಕಸವನ್ನು ಪದರ-ಪದರಗಳಾಗಿ ಸೇರಿಸಿ, ತರಕಾರಿ ಹೋಳು, ಕಡ್ಡಿ ಆದಷ್ಟು ಸಣ್ಣ ಸಣ್ಣ ತುಂಡು ಮಾಡಿ | ಹೆಚ್ಚು ಹಸಿ, ಹೆಚ್ಚು ಒಣ ಇಲ್ಲದಂತೆ ನೋಡಿಕೊಳ್ಳಿ | ಆಗಾಗ ಸ್ವಲ್ಪ ಬೆಲ್ಲದ ನೀರು / ಸ್ವಲ್ಪ ಮೊಸರು ಹಾಕಿ | ಗಾಳಿಯಾಡಲು ನಿಯಮಿತವಾಗಿ ಕೈಯಾಡಿಸಿ| ಅದರಿಂದ ಕೆಳಗೆ ಬರುವ ಕಪ್ಪು ನೀರಿಗೆ ಸಾದಾ ನೀರು ಬೆರೆಸಿ ಗಿಡಗಳಿಗೆ ಹಾಕಬಹುದು | 6-8 ವಾರಗಳಲ್ಲಿ ಸಮೃದ್ಧ ಕಾಂಪೋಸ್ಟ್ ಪಡೆಯಬಹುದು !




ಪುಟ 3 ರಿಂದ

## ಅನಂತ ಸ್ನೇಹ - ಸಂಘಟನೆ : ರಾಷ್ಟ್ರಭಕ್ತಿ-ಛಾತ್ರ ಶಕ್ತಿ

ವಾರಣಾಸಿಯಲ್ಲಿ ನಡೆದ ಪರಿಷತ್ತಿನ ಸಮ್ಮೇಲನವೊಂದರಲ್ಲಿ ಭಾಗವಹಿಸಲು ಅಚ್ಯುತ ಲಿಮಯೆ ಅನಂತಕುಮಾರರೊಡನೆ ಹೋಗಿದ್ದರು. ಹಿಂತಿರುಗಿ ಬರುವಾಗ ಮುಂಬಯಿಯಲ್ಲಿ ಇಳಿದರು. ಅಲ್ಲಿಂದ ಹುಬ್ಬಳ್ಳಿಗೆ ಹೊರಡಬೇಕು. ಪ್ರಯಾಣಕ್ಕೆ ಇನ್ನೂ ಸ್ವಲ್ಪ ಸಮಯವಿದ್ದುದರಿಂದ ಗೆಳೆಯರಿಬ್ಬರೂ ಹತ್ತಿರದ ಮಾರುಕಟ್ಟೆಯಲ್ಲಿ ಅಡ್ಡಾಡುತ್ತಿದ್ದರು.

ಅಲ್ಲೇ ಒಂದು ಪುಸ್ತಕದ ಅಂಗಡಿ. ಇಬ್ಬರೂ ಅಂಗಡಿಗೆ ಹೋದರು. ಡೇಲ್ ಕಾರ್ನೆಗಿ ಬರೆದ ಹೌ ಟು ವಿನ್ ಫ್ರೆಂಡ್ಸ್ ಅಂಡ್ ಇನ್ಫ್ಲುಯೆನ್ಸ್ ಪೀಪಲ್ ಎಂಬ ಪುಸ್ತಕ ಅನಂತಕುಮಾರನ ಕಣ್ಣಿಗೆ ಬಿತ್ತು. ಪುಸ್ತಕವನ್ನು ಎತ್ತಿಕೊಂಡು ಪುಟ ಮೊಗುಚಿದವರೇ ಅಚ್ಯುತನತ್ತ ತಿರುಗಿ “ಅಚ್ಯುತ , ಒಂದು ನೂರು ರೂಪಾಯಿ ಕೊಡು” ಎಂದರು. ಅಚ್ಯುತ ಕೊಟ್ಟ ಹಣವನ್ನು ಅಂಗಡಿಯವನಿಗೆಕೊಟ್ಟುಪುಸ್ತಕವನ್ನುಕೊಂಡಅನಂತ್ಪುಸ್ತಕದಮೊದಲ ಹಾಳೆಯಲ್ಲಿ “ ವಿತ್ ಬೆಸ್ಟ್ ಕಾಂಪ್ಲಿಮೆಂಟ್ಸ್ ಫ್ರಮ್ ಅನಂತಕುಮಾರ್” ಎಂದು ಬರೆದು ಅಚ್ಯುತನ ಕೈಗಿತ್ತು “ಹ್ಯಾಪಿ ಬರ್ತ್‌ಡೇ” ಎಂದರು.

ಆವತ್ತು ಅಚ್ಯುತ ಲಿಮಯೆ ಹುಟ್ಟಿದ ದಿನವಾಗಿತ್ತು. ಗೆಳೆಯನಿಗೆ ಉಡುಗೊರೆ ಕೊಡಲು ಆತನಿಂದಲೇ ಹಣ ಪಡೆಯಲು ಅನಂತಕುಮಾರರಿಗೇನೂ ಸಂಕೋಚವೆನಿಸಲಿಲ್ಲ. ತನ್ನ ಗೆಳೆಯನ ಅವ್ಯಾಜಪ್ರೀತಿಯನ್ನು ಕಂಡು ಅಚ್ಯುತ ಲಿಮಯೆಗೂ ತುಂಬ ಸಂತೋಷ. ಇಂಥ ಹುಟ್ಟುಹಬ್ಬದ ಉಡುಗೊರೆ ಮತ್ತಾರಿಗೆ ಸಿಕ್ಕೀತು!

ಚಿಣ್ಣರ ಚೇತನ
ಮಕ್ಕಳಿಗಾಗಿ ರೂಪಿತವಾದ ವಿಶೇಷ ಪುಟಗಳು
ಪ್ರಕಾಶಕರು:
ಶ್ರೀಮತಿ ತೇಜಸ್ವಿನಿ ಅನಂತಕುಮಾರ್
ಅಧ್ಯಕ್ಷರು, ಅದಮ್ಯ ಚೇತನ

# ಮಾರ್ಚ್ ತಿಂಗಳು ಸಂಭ್ರಮದ ಸಾಲು ಸಾಲು

ಚಳಿಗಾಲ ಮುಗಿಯುತ್ತ ಬಂದು ಬೇಸಿಗೆ ಮೆಲ್ಲಗೆ ಕಾಲಿಡುತ್ತಿದ್ದಾಗಲೇ ಈ ವರ್ಷ ಅದೆಷ್ಟೊಂದು ಹಬ್ಬಗಳು ಬಂದಿವೆ. ಹೋಳಿ ಹಬ್ಬ, ಸಂಕಷ್ಟ ಚತುರ್ಥಿ, ಯುಗಾದಿ, ರಂಜಾನ್, ಶ್ರೀರಾಮ ನವಮಿ, ಮಹಾವೀರ ಜಯಂತಿ ಇವನ್ನೆಲ್ಲ ನೀವು ಕ್ಯಾಲೆಂಡರಿನಲ್ಲೇ ಗುರುತಿಸಬಹುದು. ಆದರೆ ನಮ್ಮ ಕ್ಯಾಲೆಂಡರಿನಲ್ಲಿ ಕಾಣದ ಆದರೆ ನಮ್ಮೆಲ್ಲರ ಬದುಕಿಗೆ ಬಹು ಮಹತ್ವದ್ದೆನ್ನಿಸುವ ಐದು ‘ಜಾಗತಿಕ ಪರಿಸರ ದಿನ’ಗಳೂ ಇವೆ. ಅದರ ಪಟ್ಟಿ ಇಲ್ಲಿದೆ ನೋಡಿ:





ಮಾರ್ಚ್ 3, ವಿಶ್ವ ವನ್ಯಜೀವಿಗಳ ದಿನ
ಮಾರ್ಚ್ 20: ವಿಶ್ವ ಗುಬ್ಬಿಗಳ ದಿನ
ಮಾರ್ಚ್ 21: ವಿಶ್ವ ಅರಣ್ಯ ದಿನ
ಮಾರ್ಚ್ 22: ವಿಶ್ವ ಜಲ ದಿನ
ಮಾರ್ಚ್ 23: ವಿಶ್ವ ಹವಾಮಾನ ದಿನ

ಈ ಒಂದೊಂದು ದಿನದ ಮಹತ್ವವೂ ನಮಗೆ ಗೊತ್ತಿರಬೇಕು. ಜಗತ್ತಿನ ಎಲ್ಲ ಕಡೆ ವನ್ಯಜೀವಿಗಳು ಕಣ್ಮರೆ ಆಗುತ್ತಿವೆ. ಚಿರತೆಯನ್ನು ಹೋಲುವ ‘ಸಿವಂಗಿ’ (ಚೀತಾ) ಎಂಬ ಪ್ರಾಣಿ ನಮ್ಮ ದೇಶದಲ್ಲಿ ಎಲ್ಲೆಡೆ ಇದ್ದವು. ಬೇಟೆಯಾಡಿ ಅವುಗಳ ಸಂತತಿ ಪೂರ್ತಿ ನಶಿಸಿ ಹೋಗಿತ್ತು. ಒಂದೂ ಇರಲಿಲ್ಲ. ಈಚೆಗೆ ಪ್ರಧಾನಿ ಮೋದಿಯವರು ವಿಶೇಷ ಆಸಕ್ತಿ ತೋರಿಸಿ ಬೇರೆ ದೇಶಗಳಿಂದ ಈ ಚಂದದ ಪ್ರಾಣಿಗಳನ್ನು ವಿಮಾನದಿಂದ ತರಿಸಿದರು. ಈಗ ಅವು ಮಧ್ಯಪ್ರದೇಶದ ಕಾಡುಗಳಲ್ಲಿ ಮತ್ತೆ ಸಂತಾನೋತ್ಪತ್ತಿ ಮಾಡುತ್ತಿವೆ.

ಹುಲಿ, ಕರಡಿ, ಆನೆ, ಘೇಂಡಾ, ಕೃಷ್ಣಮೃಗ ಇತ್ಯಾದಿಗಳನ್ನು ಏನಲ್ಲ ಹರಸಾಹಸ ಮಾಡಿ ರಕ್ಷಣೆ ಮಾಡುತ್ತಿದ್ದೇವೆ. ಕಾಡಿನಲ್ಲಿ ವಾಸಿಸುವ ಅಷ್ಟೇನೂ ಪ್ರಸಿದ್ಧವಲ್ಲದ ಚಿಪ್ಪುಹಂದಿ, ತರಕರಡಿ, ಬಾವಲಿ, ಆಮೆ, ಕೆಂಪು ಪಾಂಡಾ ಇವೆಲ್ಲವು ನಿರ್ವಂಶ ಆಗುತ್ತಿದ್ದರೆ ನಮಗೆ ಗೊತ್ತೂ ಆಗುವುದಿಲ್ಲ. ಅವುಗಳ ಬಗ್ಗೆ ಅಷ್ಟಿಷ್ಟಾದರೂ ವಿದ್ಯಾರ್ಥಿಗಳಿಗೆ ಗೊತ್ತಿದ್ದರೆ ಮುಂದೆ ಅವುಗಳ ಸಂರಕ್ಷಣೆ ಮಾಡುವುದೇ ಒಂದು ವಿಶಿಷ್ಟ ವೃತ್ತಿ ಆಗಬಹುದು. ಆನೆಗಳ ಬಗ್ಗೆ ವಿಶೇಷ ಪ್ರೀತಿ ಬೆಳೆಸಿಕೊಂಡ ಪ್ರಜ್ಞಾ ಚೌಟ ಎಂಬ ಕನ್ನಡದ ಮಹಿಳೆ ಈಗ ಲೋಕ ಪ್ರಸಿದ್ಧಿ ಪಡೆದಿದ್ದಾರೆ.

ಮಾರ್ಚ್ ತಿಂಗಳಿನ ಈ ಐದೂ ‘ಪರಿಸರ ದಿನ’ಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಶಿಕ್ಷಕರಿಂದ ಕೇಳಿ ಪಡೆಯಬಹುದು. ಗುಬ್ಬಿಗಳನ್ನು ನೀವು ನೋಡಿದ್ದೀರಾ? ಎಲ್ಲರ ಮನೆಯ ಮುಂದೆ, ಮನೆಯೊಳಕ್ಕೆ ವರ್ಷವಿಡೀ ಚಿಲಿಪಿಲಿ ಸದ್ದು ಮಾಡುತ್ತ ಖುಷಿಯಿಂದ ಹಾರಾಡುತ್ತಿದ್ದ ಅವು ಈಗ ಎಲ್ಲಿ ಹೋದವೋ, ಏಕೆ ಕಣ್ಮರೆ ಆಗುತ್ತಿವೆಯೊ ನಮಗೆ ಗೊತ್ತಿರಬೇಕು. ಇನ್ನು ನೀರಿನ ದಿನ, ಅರಣ್ಯ ದಿನ, ಹವಾಮಾನ ದಿನಗಳ ಮಹತ್ವವೂ ನಮಗೆ ಗೊತ್ತಿರಬೇಕು. ಅಂಥ ದಿನಗಳ ಬಗ್ಗೆ ಚಿಕ್ಕ ಹಾಡನ್ನೊ, ಪ್ರಬಂಧವನ್ನೊ ಚಿತ್ರವನ್ನೊ ಬರೆಯಬೇಕು. ಅಥವಾ ನಾಟಕವನ್ನೂ ರಚಿಸಬಹುದು. ಶಾಲೆಯ ಕಿಟಕಿಯಲ್ಲಿ ಒಂದು ಗುಬ್ಬಿ ಬಂದು ಕೂತು ಚೀಂವ್ ಚೀಂವ್ ಎಂದಿದ್ದನ್ನು ಊಹಿಸಿಕೊಳ್ಳಿ. ಅದು ತನ್ನ ಕಷ್ಟದ ಕತೆಯನ್ನು ಹೇಳಿಕೊಳ್ಳಲು ಬಂದಿದೆ. ಆ ಕುರಿತು ನೀವೇ ಒಂದು ಪುಟ್ಟ ನಾಟಕ ಬರೆಯಬಹುದೆ? ಕ್ಲಾಸಿನಲ್ಲೇ ಅದನ್ನು ಆಡಿ ತೋರಿಸಬಹುದೆ? ಅಂದ ಹಾಗೆ, ಮಾರ್ಚ್ 27 ‘ಜಾಗತಿಕ ರಂಗಭೂಮಿ ದಿನ. ಅಂದು ಯಾವುದಾದರೂ ಒಂದು ಮಹತ್ವದ ಪರಿಸರ ದಿನದ ಬಗ್ಗೆ ನಾಟಕ ಆಡಬಹುದು

# ಸಿಹಿನೀರಿನ ಡಾಲ್ಫಿನ್‌ಗಳ ರಕ್ಷಣೆಗೆ ಅಂಬುಲೆನ್ಸ್




ನಮ್ಮ ರಾಷ್ಟ್ರೀಯ ಜಲಜೀವಿ ಯಾವುದು ಗೊತ್ತೆ? ಸಿಹಿನೀರಿನ ಡಾಲ್ಫಿನ್ ಮೀನುಗಳು. ಗಂಗಾ, ಯಮುನಾ ಸೇರಿದಂತೆ ಉತ್ತರ ಭಾರತದ ಅನೇಕ ನದಿಗಳಲ್ಲಿ ಇವು ಈಜುತ್ತಿರುತ್ತವೆ. ಗಾತ್ರದಲ್ಲಿ ಇವು ಸಮುದ್ರದ ಡಾಲ್ಫಿನ್ ಗಳಂತೆ ಒಂದೂವರೆ ಎರಡು ಮೀಟರ್ ಉದ್ದ ಇರುತ್ತವೆ. ತೂಕ 100-150 ಕಿಲೊ. ವ್ಯತ್ಯಾಸ ಏನೆಂದರೆ ಇವುಗಳ ಮೂತಿ ಉದ್ದ ಇದ್ದು, ತುಂಬ ಮುದ್ದಾಗಿ ಕಾಣುತ್ತವೆ. ಇವು ಮನುಷ್ಯರ ಮೇಲೆ ದಾಳಿ ಮಾಡುವುದಿಲ್ಲ. ಪಾಪದ ಪ್ರಾಣಿಗಳು.

ಆದರೆ ಈಚಿನ ವರ್ಷಗಳಲ್ಲಿ ಇವುಗಳ ಬದುಕು ಕಷ್ಟದ್ದಾಗಿದೆ. ನದಿಗಳಲ್ಲಿ ಅಲ್ಲಲ್ಲಿ ನಗರಗಳ ಕೊಳೆನೀರಿನ ಪೈಪ್‌ಗಳಿರುತ್ತವೆ. ಆ ಮಾಲಿನ್ಯದಲ್ಲಿ ಉಸಿರುಗಟ್ಟಿ, ಆಹಾರ ಹುಡುಕಲು ಕಷ್ಟಪಡುತ್ತವೆ. ನದಿಗಳಲ್ಲಿ ಅಲ್ಲಲ್ಲಿ ಅಡ್ಡಗಟ್ಟೆ ಹಾಕಿರುತ್ತಾರೆ. ಅವುಗಳ ಎದುರು ನೀರೆತ್ತಲು ದೊಡ್ಡ ಪಂಪ್‌ಗಳನ್ನು ಹಾಕಿರುತ್ತಾರೆ. ಅವುಗಳ ಮಧ್ಯೆ ಸಿಕ್ಕಿ ಹಾಕಿಕೊಂಡು ಸಾಯುತ್ತವೆ. ಅಥವಾ ಮೀನುಗಾರರ ಬಲೆಯಲ್ಲಿ ಸಿಲುಕಿ ಪೆಟ್ಟಾಗಿ, ಹಸಿವೆಯಿಂದ ಒದ್ದಾಡುತ್ತವೆ. ಅಥವಾ ನದಿಯಲ್ಲಿ ನೀರು ಕಡಿಮೆ ಆದಾಗ ಈಜಲಾರದೇ ಕೆಸರಲ್ಲಿ ಸಿಲುಕಿ ಸಾಯುತ್ತವೆ. ಅಣೆಕಟ್ಟೆಯ ಬದಿಯ ನೀರಾವರಿ ಕಾಲುವೆಗಳಲ್ಲಿ ಈಜುತ್ತ ಹೋಗಿ ಅಲ್ಲಿ ನೀರಿಲ್ಲದೆ, ಹಿಂದಕ್ಕೂ ಬರಲಾಗದೆ ಸಾಯುತ್ತವೆ.

ಕಷ್ಟಕ್ಕೆ ಸಿಲುಕಿದ ಅವುಗಳ ಸಹಾಯಕ್ಕೆಂದೇ ಈಚೆಗೆ ‘ಡಾಲ್ಫಿನ್ ಅಂಬುಲೆನ್ಸ್‘ ವಾಹನಗಳ ವ್ಯವಸ್ಥೆ ಮಾಡಲಾಗಿದೆ. ಗಂಗಾ ನದಿಯನ್ನು ಶುದ್ಧ ಇಡಲೆಂದು ‘ನಮಾಮಿ ಗಂಗೆ ಯೋಜನೆ ಇದೆ ತಾನೆ? ತಜ್ಞ ಪಶುವೈದ್ಯರು ಮತ್ತು ಈಜುಗಾರರು ತಮ್ಮ ಸಲಕರಣೆ ಒಯ್ದು ಸಹಾಯಕ್ಕೆ ಧಾವಿಸುತ್ತಾರೆ. ಆದರೆ ಗಂಗಾ ಯಮುನಾ ಕಣಿವೆ ಸುದೀರ್ಘವಾಗಿದೆ. ಉತ್ತರಪ್ರದೇಶ, ಬಿಹಾರ, ಝಾರ್ಖಂಡ್, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಸರಯೂ, ಕೋಶಿ, ಸೋನ್, ದಾಮೋದರ್, ಗೋಮತಿ, ಗಂಡಕ್, ಘಾಗ್ರಾ ಹೀಗೆ ಎಷ್ಟೊಂದು ಉಪನದಿಗಳ ದಡಗಳಲ್ಲಿ ಸಾವಿರಾರು ಕಡೆ ಮೀನುಗಾರಿಕೆ ನಡೆಯುತ್ತದೆ. ಜೊತೆಗೆ ನೀರಾವರಿ ಕಾಲುವೆಗಳಲ್ಲೂ ಇವು ಈಜುತ್ತಿರುತ್ತವೆ. ಈ ಡಾಲ್ಫಿನ್‌ಗಳ ಬಗ್ಗೆ ಅಥವಾ ಅಲ್ಲಿನ ವಿಶಿಷ್ಟ ಘಡಿಯಾಲ್ ಮೊಸಳೆಗಳ ಬಗ್ಗೆ ಅಲ್ಲಿನ ಮಕ್ಕಳಿಗೆ ಮತ್ತು ದೊಡ್ಡವರಿಗೂ ಜ್ಞಾನ ಕಡಿಮೆ. ಬಲೆಯಲ್ಲಿ ಯಾವುದೋ ದೊಡ್ಡ ಮೀನು ಸಿಕ್ಕಿದೆ’ ಎಂದು ಹೇಳುತ್ತಾರೆ.



ಡಾಲ್ಫಿನ್ ಎಂದರೆ ಮೀನುಗಳಲ್ಲ. ಅವು ನೀರಲ್ಲಿ ವಾಸಿಸುವ ಸ್ತನಿಗಳು. ಅವು ಮೊಟ್ಟೆ ಇಡುವುದಿಲ್ಲ. ಮರಿ ಮಾಡಿ ಹಾಲೂಡಿಸುತ್ತವೆ. ಹೀಗೆ ನೀರಲ್ಲಿ ವಾಸಿಸುವ ಬೇರೆ ಸ್ತನಿ ಜೀವಿಗಳ ಹೆಸರು ಗೊತ್ತೆ ನಿಮಗೆ?

# ವಿಷಮುಕ್ತ ಬದುಕಿಗೆ ಹಾದಿ: ಮನೆಯಂಗಳದ 'ಕಪ್ಪು ಚಿನ್ನ'

ಇಂದಿನ ಧಾವಂತದ ಬದುಕಿನಲ್ಲಿ ನಾವು ಮಾರುಕಟ್ಟೆಯಿಂದ ತರುವ ಸೊಪ್ಪು ಮತ್ತು ತರಕಾರಿಗಳು ಕಣ್ಣಿಗೆ ಎಷ್ಟೇ ಆಕರ್ಷಕವಾಗಿ ಕಂಡರೂ, ಅವುಗಳ ಅಂತರಾಳದಲ್ಲಿ ಅಡಗಿರುವ ರಾಸಾಯನಿಕಗಳ ಬಗ್ಗೆ ನಮಗೆ ಅರಿವಿರುವುದಿಲ್ಲ. ಬೆಳೆಗಳಿಗೆ ಸಿಂಪಡಿಸುವ ಕೀಟನಾಶಕಗಳು ಮತ್ತು ರಾಸಾಯನಿಕ ಗೊಬ್ಬರಗಳು ನಮ್ಮ ಆರೋಗ್ಯದ ಮೇಲೆ ನಿಧಾನಗತಿಯ ವಿಷವಾಗಿ ಪರಿಣಮಿಸುತ್ತಿವೆ. ಈ ಆತಂಕದಿಂದ ಪಾರಾಗಲು ಇರುವ ಅತ್ಯುತ್ತಮ ಮಾರ್ಗವೆಂದರೆ ನಮ್ಮ ಮನೆಯಲ್ಲೇ ಸಣ್ಣದೊಂದು ಕೈತೋಟವನ್ನು ನಿರ್ಮಿಸಿಕೊಳ್ಳುವುದು. ತುಸು ಆಸಕ್ತಿ ಮತ್ತು ನಿರಂತರ ಪರಿಶ್ರಮವಿದ್ದರೆ, ನಮಗೆ ದಿನನಿತ್ಯ ಬೇಕಾಗುವ ತಾಜಾ ಸೊಪ್ಪುಗಳನ್ನು ನಾವೇ ಬೆಳೆಸಿಕೊಳ್ಳಬಹುದು. ಇದು ಕೇವಲ ಹವ್ಯಾಸವಲ್ಲ, ಬದಲಿಗೆ ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ನಾವು ಇಡಬಹುದಾದ ಒಂದು ದಿಟ್ಟ ಹೆಜ್ಜೆಯಾಗಿದೆ.

ಕೈತೋಟದ ಯಶಸ್ಸಿನ ಹಿಂದಿರುವ ರಹಸ್ಯವೆಂದರೆ ಅದು ನಾವು ಬಳಸುವ ಗೊಬ್ಬರ. ಮಾರುಕಟ್ಟೆಯ ರಾಸಾಯನಿಕ ಗೊಬ್ಬರಗಳ ಬದಲಿಗೆ ಮನೆಯಲ್ಲೇ ಉತ್ಪತ್ತಿಯಾಗುವ ಅಡುಗೆ ಮನೆಯ ಹಸಿಕಸದಿಂದ ಅತ್ಯುತ್ತಮ ಕಾಂಪೋಸ್ಟ್ ತಯಾರಿಸಬಹುದು. ಪ್ರತಿದಿನ ಸಂಗ್ರಹವಾಗುವ ತರಕಾರಿ ಸಿಪ್ಪೆಗಳು, ಹಣ್ಣಿನ ಉಳಿಕೆಗಳನ್ನು ಒಂದು ತೊಟ್ಟಿಯಲ್ಲಿ ಶೇಖರಿಸುತ್ತಾ ಬಂದರೆ, ಅವು ಕ್ರಮೇಣ ಅಮೂಲ್ಯವಾದ ಸಾವಯವ ಗೊಬ್ಬರವಾಗಿ ಪರಿವರ್ತಿತವಾಗುತ್ತವೆ. ಆದರೆ ಈ ಪ್ರಕ್ರಿಯೆಯಲ್ಲಿ ತುಸು ಎಚ್ಚರಿಕೆ ಅಗತ್ಯ. ಕಸವನ್ನು ಹಾಗೆಯೇ ಬಿಟ್ಟರೆ ಅದು ಕೊಳೆತು ದುರ್ನಾತ ಬೀರುವ ಅಥವಾ ಹುಳುಗಳು ಬೆಳೆಯುವ ಸಾಧ್ಯತೆ ಇರುತ್ತದೆ. ಇದನ್ನು ತಡೆಯಲು, ಪ್ರತಿ ಬಾರಿ ಹಸಿಕಸ ಹಾಕಿದಾಗ ಅದರ ಮೇಲೆ ಒಣ ಎಲೆಗಳು, ಕಳೆಸೊಪ್ಪು ಅಥವಾ ಎರಡು ಮುಷ್ಟಿ ಮಣ್ಣನ್ನು ಹರಡಬೇಕು. ಇದು ತೇವಾಂಶವನ್ನು ಸಮತೋಲನದಲ್ಲಿಟ್ಟು, ಕಸವು ಮಣ್ಣಿನೊಂದಿಗೆ ಬೆರೆಯಲು ಸಹಕರಿಸುತ್ತದೆ.

ಈ ಗೊಬ್ಬರ ತಯಾರಿಕೆಯನ್ನು ಮತ್ತಷ್ಟು ತ್ವರಿತಗೊಳಿಸಲು ಮತ್ತು ಗುಣಮಟ್ಟವನ್ನು ಹೆಚ್ಚಿಸಲು ಒಂದು ಸರಳ ವೈಜ್ಞಾನಿಕ ವಿಧಾನವನ್ನು ಅನುಸರಿಸಬಹುದು. ಒಂದು ದೊಡ್ಡ ಬಾಟಲಿಯಲ್ಲಿ ಸ್ವಲ್ಪ ಹಳೆಯ ಕಾಂಪೋಸ್ಟ್ ಅಥವಾ ಮಣ್ಣನ್ನು ತೆಗೆದುಕೊಂಡು, ಅದಕ್ಕೆ ಒಂದೆರಡು ಚಮಚ ಬೆಲ್ಲ ಮತ್ತು ಹುಳಿ ಮಜ್ಜಿಗೆಯನ್ನು ಬೆರೆಸಬೇಕು. ಈ ಮಿಶ್ರಣವನ್ನು ಎರಡು ದಿನಗಳ ಕಾಲ ಮುಚ್ಚಿಟ್ಟಾಗ ಅದರಲ್ಲಿ ಗಿಡಗಳಿಗೆ ಪೂರಕವಾದ ಕೋಟ್ಯಂತರ ಸೂಕ್ಷ್ಮಾಣುಜೀವಿಗಳು ವೃದ್ಧಿಯಾಗುತ್ತವೆ.



ಈ ದ್ರಾವಣಕ್ಕೆ ನೀರು ಸೇರಿಸಿ ಕಾಂಪೋಸ್ಟ್ ರಾಶಿಗೆ ಸುರಿಯುವುದರಿಂದ ವಿಘಟನೆಯ ಪ್ರಕ್ರಿಯೆ ವೇಗಗೊಳ್ಳುತ್ತದೆ. ವಾರಕ್ಕೊಮ್ಮೆ ಈ ಮಿಶ್ರಣವನ್ನು ತಿರುವಿ ಹಾಕುವುದರಿಂದ ಗಾಳಿಯಾಡಲು ಅನುಕೂಲವಾಗಿ, ಸುಮಾರು ಎರಡು ತಿಂಗಳ ಅವಧಿಯಲ್ಲಿ ಹಿತಕರ ಪರಿಮಳ ಬೀರುವ ಪುಡಿ ರೂಪದ ಕಪ್ಪು ಕಾಂಪೋಸ್ಟ್ ಸಿದ್ಧವಾಗುತ್ತದೆ.

ಹೀಗೆ ತಯಾರಾದ ಕಾಂಪೋಸ್ಟ್ ಅನ್ನು ಕುಂಡಗಳಲ್ಲಿ ಚಿಗುರುತ್ತಿರುವ ಸಸಿಗಳಿಗೆ ಹಾಕಿದಾಗ, ದಂಟು, ಪಾಲಕ್, ಕೊತ್ತುಂಬರಿ, ಹಸಿಮೆಣಸು ಮತ್ತು ಮೂಲಂಗಿಯಂತಹ ತರಕಾರಿಗಳು ಅತ್ಯಂತ ಸಮೃದ್ಧವಾಗಿ ಬೆಳೆಯುತ್ತವೆ. ನಿಮ್ಮ ಕೈತೋಟದಲ್ಲಿ ಬೆಳೆದ ಈ ವಿಷರಹಿತ ಮತ್ತು ಸ್ವಾದಿಷ್ಟ ಸೊಪ್ಪುಗಳು ಕೇವಲ ಅಡುಗೆಯ ರುಚಿಯನ್ನು ಹೆಚ್ಚಿಸುವುದಲ್ಲದೆ, ದೈಹಿಕ ಆರೋಗ್ಯವನ್ನೂ ವೃದ್ಧಿಸುತ್ತವೆ. ಮನೆಯ ತ್ಯಾಜ್ಯವನ್ನು ಮರುಬಳಕೆ ಮಾಡುವ ಮೂಲಕ ಪರಿಸರಕ್ಕೆ ಪೂರಕವಾಗಿ ಬದುಕುವುದು ಮತ್ತು ಸ್ವಚ್ಛವಾದ ಆಹಾರವನ್ನು ಸೇವಿಸುವುದು ಇಂದಿನ ಕಾಲದ ಅನಿವಾರ್ಯತೆಯಾಗಿದೆ. ಈ ಪುಟ್ಟ ಪ್ರಯತ್ನವು ನಮ್ಮನ್ನು ಪ್ರಕೃತಿಗೆ ಹತ್ತಿರವಾಗಿಸುವುದರ ಜೊತೆಗೆ, ನವೋಲ್ಲಾಸವನ್ನೂ ನೀಡುತ್ತದೆ.









## ಅನ್ನದಾನ ಸೇವಾ ಕಾರ್ಯ

ಅದಮ್ಯಚೇತನ ಸಂಸ್ಥೆಯು ಬೆಂಗಳೂರು, ಕಲಬುರಗಿ ಮತ್ತು ಹುಬ್ಬಳ್ಳಿ, ಅಯೋಧ್ಯೆ, ಜೋಧಪುರ ನಗರಗಳಲ್ಲಿ ನಿರಂತರವಾಗಿ ನಿತ್ಯ ಅನ್ನದಾನ ಕಾರ್ಯಕ್ರಮವನ್ನು ನಡೆಸುತ್ತಿದೆ. ಈ ಉಪಕ್ರಮದ ಮುಖ್ಯ ಗುರಿ, ಅಗತ್ಯವಿರುವ ಜನರಿಗೆ ಪ್ರತಿದಿನ ರುಚಿಕರವಾದ ಮತ್ತು ಪೌಷ್ಟಿಕಾಂಶಯುಕ್ತ ಭೋಜನ ಸೌಲಭ್ಯವನ್ನು ಒದಗಿಸುವುದಾಗಿದೆ.

# ಮಹಾರಾಜ ರಣಜಿತ್ ಸಿಂಗ್

ವ್ಯಕ್ತಿ ವಿಶೇಷ ಮಾಲಿಕೆ



ಭಾರತೀಯ ಇತಿಹಾಸದ ಪುಟಗಳಲ್ಲಿ 'ಪಂಜಾಬಿನ ಸಿಂಹ' ಎಂದೇ ಗರ್ಜಿಸಿದವರು ಮಹಾರಾಜ ರಣಜಿತ್ ಸಿಂಗ್.'ಶೇರ್-ಎ-ಪಂಜಾಬ್' ಎಂದೇ ಖ್ಯಾತರಾದ ಇವರು, ಕೇವಲ ಒಂದು ಪ್ರಾಂತ್ಯದ ರಾಜನಾಗಿರದೆ, ಛಿದ್ರವಾಗಿದ್ದ ಹನ್ನೆರಡು ಸಿಖ್ 'ಮಿಸ್ಲ್'ಗಳನ್ನು(ಪಂಗಡ) ಏಕೀಕರಿಸಿ ಬಲಿಷ್ಠ 'ಖಾಲ್ಸಾ ರಾಜ್ಯ'ವನ್ನು ಸ್ಥಾಪಿಸಿದ ಈ ಧೀಮಂತ ನಾಯಕನ ಶೌರ್ಯ ಮತ್ತು ಆಡಳಿತ ವೈಖರಿ ಇಂದಿಗೂ ನಮಗೆ ಸ್ಫೂರ್ತಿದಾಯಕ. ಹದಿನೆಂಟನೇ ಶತಮಾನದ ಕೊನೆಯಲ್ಲಿ ಅಫ್ಘಾನ್ ಆಕ್ರಮಣಕಾರರ ಉಪಟಳ ಮತ್ತು ಆಂತರಿಕ ಕಲಹಗಳಿಂದ ಕಂಗೆಟ್ಟಿದ್ದ ಪಂಜಾಬ್‌ಗೆ ಇವರು ಹೊಸ ಭರವಸೆಯ ಆಶಾಕಿರಣವಾಗಿ ಮೂಡಿಬಂದರು.

1780ರಲ್ಲಿ ಜನಿಸಿದ ರಣಜಿತ್ ಸಿಂಗ್ ಅವರ ಬಾಲ್ಯ ಸುಲಭವಾಗಿರಲಿಲ್ಲ. ಎಳೆಯ ವಯಸ್ಸಿನಲ್ಲೇ ಸಿಡುಬು ರೋಗಕ್ಕೆ ತುತ್ತಾಗಿ ತಮ್ಮ ಎಡಗಣ್ಣಿನ ದೃಷ್ಟಿಯನ್ನು ಕಳೆದುಕೊಂಡರು. ಆದರೆ, ಈ ದೈಹಿಕ ಕೊರತೆ ಅವರ ಆತ್ಮವಿಶ್ವಾಸಕ್ಕೆ ಅಡ್ಡಿಯಾಗಲಿಲ್ಲ. ಕೇವಲ 12ನೇ ವಯಸ್ಸಿನಲ್ಲಿ ತಂದೆಯ ನಿಧನದ ನಂತರ ಸುಕರ್ಚಕಿಯಾ ಮಿಸ್ಲ್‌ನ ಜವಾಬ್ದಾರಿಯನ್ನು ಹೊತ್ತ ಇವರು, ತಮ್ಮ ರಣತಂತ್ರ ಮತ್ತು ಚತುರತೆಯಿಂದ 1799ರಲ್ಲಿ ಲಾಹೋರ್ ಅನ್ನು ವಶಪಡಿಸಿಕೊಂಡರು. ಇದು ಸಿಖ್ ಸಾಮ್ರಾಜ್ಯದ ಅಧಿಕೃತ ಅಡಿಪಾಯವಾಯಿತು. 1801ರಲ್ಲಿ ಪಟ್ಟಾಭಿಷಿಕ್ತರಾದ ಅವರು, ತಮ್ಮನ್ನು ತಾವು ಕೇವಲ ಒಬ್ಬ ರಾಜನನ್ನಾಗಿ ನೋಡದೆ, ಸಾರ್ವಜನಿಕ ಸೇವೆಯನ್ನೇ ಪರಮ ಧರ್ಮವೆಂದು ನಂಬಿದ್ದರು.

ಮಹಾರಾಜ ರಣಜಿತ್ ಸಿಂಗ್ ಅವರ ಆಡಳಿತದ ಅತ್ಯಂತ ಸುಂದರ ಭಾಗವೆಂದರೆ ಅವರ ಧರ್ಮ ಸಹಿಷ್ಣುತೆಯ ನಿಲುವು. ಸಿಖ್ ಧರ್ಮದ ಪರಮ ಭಕ್ತರಾಗಿದ್ದರೂ, ಅವರ ಆಸ್ಥಾನದಲ್ಲಿ ಹಿಂದೂ ಮತ್ತು ಮುಸ್ಲಿಂ ಸಮುದಾಯದ ಪ್ರತಿಭಾವಂತರಿಗೆ ಅತ್ಯುನ್ನತ ಸ್ಥಾನಮಾನವಿತ್ತು. ಅವರ ನಂಬಿಕಸ್ಥ ವಜೀರ್ (ವಿದೇಶಾಂಗ ಸಚಿವ) ಆಗಿ ಫಕೀರ್ ಅಜೀಜುದ್ದೀನ್ ಕಾರ್ಯನಿರ್ವಹಿಸುತ್ತಿದ್ದರೆ, ರಾಜ್ಯದ ಆರ್ಥಿಕ ಜವಾಬ್ದಾರಿಯನ್ನು ದೀವಾನ್ (ಹಣಕಾಸು ಸಚಿವ) ಆಗಿ ದಿನಾನಾಥ್ ಅವರು ಅತ್ಯಂತ ದಕ್ಷತೆಯಿಂದ ನಿಭಾಯಿಸುತ್ತಿದ್ದರು. “ದೇವರು ನನಗೆ ಒಂದೇ ಕಣ್ಣಿನ ದೃಷ್ಟಿ ಕೊಟ್ಟಿದ್ದಾನೆ, ಏಕೆಂದರೆ ಎಲ್ಲ ಧರ್ಮಗಳನ್ನು ಒಂದೇ ದೃಷ್ಟಿಯಿಂದ ನೋಡಲಿ ಎಂದು” ಎನ್ನುತ್ತಿದ್ದ ಅವರ ಮಾತುಗಳು ಕೇವಲ ಘೋಷಣೆಯಾಗಿರದೆ, ಅವರ ಆಡಳಿತದ ಮೂಲಮಂತ್ರವಾಗಿತ್ತು



ಧಾರ್ಮಿಕ ದಾನ-ದತ್ತಿಗಳ ವಿಷಯದಲ್ಲಿ ರಣಜಿತ್ ಸಿಂಗ್ ಅವರ ಹೆಸರು ಇಂದಿಗೂ ಸುವರ್ಣ ಅಕ್ಷರಗಳಲ್ಲಿ ದಾಖಲಾಗಿದೆ. ವಾರಣಾಸಿಯ ಪವಿತ್ರ ಕಾಶಿ ವಿಶ್ವನಾಥ ದೇವಾಲಯಕ್ಕೆ ಅವರು ಸುಮಾರು 1000 ಕೆ.ಜಿ (ಒಂದು ಟನ್) ಶುದ್ಧ ಚಿನ್ನವನ್ನು ದಾನವಾಗಿ ನೀಡಿದ್ದರು. ದೇವಾಲಯದ ಎರಡು ಪ್ರಮುಖ ಶಿಖರಗಳಿಗೆ ಈ ಚಿನ್ನದ ಲೇಪನವನ್ನು ಮಾಡಲಾಗಿದ್ದು, ಇದು ಇಂದಿಗೂ ರಣಜಿತ್ ಸಿಂಗ್ ಅವರ ಭಕ್ತಿಗೆ ಸಾಕ್ಷಿಯಾಗಿದೆ. ಅಷ್ಟೇ ಅಲ್ಲದೆ, ಅಮೃತಸರದ ಹರ್ಮಂದಿರ್ ಸಾಹಿಬ್‌ಗೆ ಅಮೃತಶಿಲೆ ಮತ್ತು ಚಿನ್ನದ ಲೇಪನ ಮಾಡಿಸಿ ಅದನ್ನು ವಿಶ್ವವಿಖ್ಯಾತ 'ಗೋಲ್ಡನ್ ಟೆಂಪಲ್' ಆಗಿ ಪರಿವರ್ತಿಸಿದ ಶ್ರೇಯಸ್ಸೂ ಇವರಿಗೆ ಸಲ್ಲುತ್ತದೆ.

ಸೇನಾ ಬಲದ ವಿಷಯದಲ್ಲಿ ರಣಜಿತ್ ಸಿಂಗ್ ಅವರು ಏಷ್ಯಾದಲ್ಲೇ ಅತ್ಯಂತ ಶಕ್ತಿಶಾಲಿ ಮತ್ತು ಆಧುನಿಕ 'ಖಾಲ್ಸಾ ಸೈನ್ಯ'ವನ್ನು ಹೊಂದಿದ್ದರು. ಅಂದಿನ ಕಾಲಕ್ಕೆ ಬ್ರಿಟಿಷ್ ಸೇನೆಗೆ ಸರಿಸಾಟಿಯಾಗಿ ನಿಲ್ಲಬಲ್ಲ ಏಕೈಕ ಪಡೆ ಇದಾಗಿತ್ತು. ಯುರೋಪಿಯನ್ ಜನರಲ್‌ಗಳನ್ನು ನೇಮಿಸಿಕೊಂಡು ತಮ್ಮ ಸೈನ್ಯಕ್ಕೆ ಪಾಶ್ಚಾತ್ಯ ಮಾದರಿಯ ಶಿಸ್ತು ಮತ್ತು ಆಧುನಿಕ ತರಬೇತಿ ನೀಡಿದ್ದರು. ಇವರ ಜೀವಿತಾವಧಿಯಲ್ಲಿ ಪಂಜಾಬ್‌ನ ಗಡಿಯೊಳಗೆ ಕಾಲಿಡಲು ಬ್ರಿಟಿಷರು ಹತ್ತು ಬಾರಿ ಯೋಚಿಸುತ್ತಿದ್ದರು. ಖೈಬರ್ ಪಾಸ್‌ನಂತಹ ಅಪಾಯಕಾರಿ ಗಡಿಗಳನ್ನು ರಕ್ಷಿಸಿ ಅಫ್ಘಾನ್ ಆಕ್ರಮಣಕಾರರನ್ನು ಸಂಪೂರ್ಣವಾಗಿ ಹಿಮ್ಮೆಟ್ಟಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

1839ರಲ್ಲಿ ಮಹಾರಾಜರ ನಿಧನದ ನಂತರ ಸಿಖ್ ಸಾಮ್ರಾಜ್ಯವು ಅಸ್ತವ್ಯಸ್ತವಾಯಿತು. ಆದರೂ, ರಣಜಿತ್ ಸಿಂಗ್ ಅವರು ಬಿಟ್ಟು ಹೋದ ಶೌರ್ಯದ ಪರಂಪರೆ, ಧಾರ್ಮಿಕ ಸಹಿಷ್ಣುತೆ ಮತ್ತು ಸಮಾನತೆಯ ಪಾಠಗಳು ಇಂದಿಗೂ ಪ್ರಸ್ತುತವಾಗಿವೆ. ಅವರು ಕೇವಲ ಒಂದು ಸಾಮ್ರಾಜ್ಯದ ಸ್ಥಾಪಕರಲ್ಲ, ಬದಲಾಗಿ ಭಾರತೀಯತೆಯ ಹೆಮ್ಮೆಯ ಸಂಕೇತ. ಪಂಜಾಬಿನ ಮಣ್ಣಿನ ಈ ವೀರಪುತ್ರನ ಕಥೆ ಪ್ರತಿ ತಲೆಮಾರಿಗೂ ಸ್ಫೂರ್ತಿಯ ಚಿಲುಮೆಯಾಗಿದೆ.



**ವಿಶ್ವವಿಖ್ಯಾತ ಸುವರ್ಣ ಮಂದಿರ: ಹರ್ಮಂದಿರ್ ಸಾಹಿಬ್‌ಗೆ ಬಂಗಾರದ ಕವಚ ತೊಡಿಸಿದ ಶೇರ್-ಎ-ಪಂಜಾಬ್"**

## ಒಂದು ಹೆಜ್ಜೆ ಪರಿಸರದ ಕಡೆ — ಶೂನ್ಯ ತ್ಯಾಜ್ಯಕ್ಕೆ ಪ್ಲೇಟ್ ಬ್ಯಾಂಕ್ ಮಾದರಿ



ಪರಿಸರ ಸಂರಕ್ಷಣೆಯ ದೃಷ್ಟಿಯಿಂದ 'ಅದಮ್ಯ ಚೇತನ' ಸಂಸ್ಥೆಯು ಜಾರಿಗೆ ತಂದಿರುವ 'ಪ್ಲೇಟ್ ಬ್ಯಾಂಕ್' ವ್ಯವಸ್ಥೆಯು ಇಂದು ರಾಜ್ಯಾದ್ಯಂತ ಮಾದರಿಯಾಗಿ ಬೆಳೆಯುತ್ತಿದೆ. ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳ ಮಠ-ಮಾನ್ಯಗಳು, ಶಾಲಾ-ಕಾಲೇಜುಗಳು ಹಾಗೂ ಸಂಘ-ಸಂಸ್ಥೆಗಳು ತಮ್ಮ ಶುಭ ಸಮಾರಂಭಗಳಲ್ಲಿ ಪ್ಲಾಸ್ಟಿಕ್ ಮುಕ್ತ ವ್ಯವಸ್ಥೆಗಾಗಿ ಈ ಸೌಲಭ್ಯವನ್ನು ಸಕ್ರಿಯವಾಗಿ ಬಳಸಿಕೊಳ್ಳುತ್ತಿವೆ.

ತ್ಯಾಜ್ಯಮುಕ್ತ 'ಚಿಗುರು' ಕಾರ್ಯಕ್ರಮ: ಇತ್ತೀಚೆಗೆ ದಿನಾಂಕ 10-12-2025 ರಂದು ನಡೆದ 'ಯೂತ್ ಫಾರ್ ಸೇವಾ' ಸಂಸ್ಥೆಯ 'ಚಿಗುರು' ಕಾರ್ಯಕ್ರಮಕ್ಕಾಗಿ ಅದಮ್ಯ ಚೇತನದ ಪ್ಲೇಟ್ ಬ್ಯಾಂಕ್‌ನಿಂದ ಸುಮಾರು 10,000ಕ್ಕೂ ಹೆಚ್ಚು ಸ್ಟೀಲ್ ಪ್ಲೇಟ್ ಹಾಗೂ ಲೋಟಗಳನ್ನು ಒದಗಿಸಲಾಗಿತ್ತು. ಕೇವಲ ಪಾತ್ರೆಗಳನ್ನು ನೀಡುವುದಷ್ಟೇ ಅಲ್ಲದೆ, ಅವುಗಳ ವ್ಯವಸ್ಥಿತ ಸಂಗ್ರಹಣೆ, ತೊಳೆಯುವುದು ಮತ್ತು ಮರುಬಳಕೆಗೆ ಬೇಕಾದ ಪೂರ್ಣ ಸಿದ್ಧತೆಗಳನ್ನು ಅದಮ್ಯ ಚೇತನದ ತಂಡವು ಯಶಸ್ವಿಯಾಗಿ ನಿರ್ವಹಿಸಿತು.

ಈ ಉಪಕ್ರಮದ ಮೂಲಕ ಸುಮಾರು 10,000ಕ್ಕೂ ಹೆಚ್ಚು ಅಡಿಕೆ ತಟ್ಟೆಗಳು ಮತ್ತು ಪೇಪರ್ ಕಪ್‌ಗಳ ಬಳಕೆ ತಪ್ಪಿದಂತಾಗಿದೆ. ಅಷ್ಟೇ ಅಲ್ಲದೆ, ಸಾವಿರಾರು ಪ್ಲಾಸ್ಟಿಕ್ ಬಾಟಲಿಗಳು ಹಾಗೂ ನೂರಾರು ಬಿಸಾಡಬಹುದಾದ ಪ್ಲಾಸ್ಟಿಕ್ ಕವರ್‌ಗಳು ಕಸದ ರಾಶಿ (Landfill) ಸೇರುವುದನ್ನು ಯಶಸ್ವಿಯಾಗಿ ತಡೆಯುವ ಮೂಲಕ ಪರಿಸರ ಮಾಲಿನ್ಯವನ್ನು ಗಣನೀಯವಾಗಿ ಕಡಿಮೆ ಮಾಡಲಾಗಿದೆ.

'ಯೂತ್ ಫಾರ್ ಸೇವಾ' ಸಂಸ್ಥೆಯ ಕಾರ್ಯಕರ್ತರು ಈ ಪ್ಲೇಟ್ ಬ್ಯಾಂಕ್ ಸೌಲಭ್ಯವನ್ನು ಬಳಸಿಕೊಳ್ಳುವ ಮೂಲಕ, ಕಾರ್ಯಕ್ರಮವನ್ನು ಸಂಪೂರ್ಣವಾಗಿ 'ಶೂನ್ಯ ತ್ಯಾಜ್ಯ' (Zero Waste) ಮಾದರಿಯಲ್ಲಿ ನಡೆಸಿದ ಸಾರ್ಥಕತೆಯನ್ನು ಮೆರೆದರು.

ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣದ ಅದಮ್ಯ ಚೇತನದ ಈ ಕನಸಿಗೆ ಇದೀಗ ಮತ್ತಷ್ಟು ಬಲ ಬಂದಿದೆ. ಸಂಸ್ಥೆಯ ಪ್ಲೇಟ್ ಬ್ಯಾಂಕ್ ವ್ಯವಸ್ಥೆಯು ಕೇವಲ ಕರ್ನಾಟಕಕ್ಕೆ ಸೀಮಿತವಾಗದೆ, ಇತ್ತೀಚೆಗೆ ಮಹಾರಾಷ್ಟ್ರದ ಸಾಂಗ್ಲಿ, ಬೆಳಗಾವಿ,, ಕೊಪ್ಪಳ ಜಿಲ್ಲೆಯ ಗಂಗಾವತಿ ಹಾಗೂ ಶಿವಮೊಗ್ಗದ ಹೊಸನಗರದಲ್ಲಿಯೂ ಹೊಸ ಶಾಖೆಗಳು ಆರಂಭಗೊಂಡಿವೆ. ಈ ಮೂಲಕ ಸಂಸ್ಥೆಯ ಪರಿಸರ ಸ್ನೇಹಿ ಅಭಿಯಾನವು ಹೊರ ರಾಜ್ಯಗಳಿಗೂ ವಿಸ್ತರಿಸುತ್ತಾ ರಾಷ್ಟ್ರಮಟ್ಟದಲ್ಲಿ ಗಮನ

**ಇತರ ಚಟುವಟಿಕೆಗಳು:** ಅದಮ್ಯ ಚೇತನವು ಭಗವದ್ಗೀತಾ ಪಠಣ, ಶ್ರೀಚೇತನ ಸಭೆ, 35 ಕಡೆ ಪ್ಲೇಟ್ ಬ್ಯಾಂಕ್, 10 ಕೇಂದ್ರಗಳಿಂದ ಉಚಿತ ಭೋಜನ ವಿತರಣೆ ಆದಿಯಾಗಿ ಮುಂತಾದ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಡೆಸಿಕೊಂಡು ಬರುತ್ತಿದೆ.

## ತಿಂಗಳ ವರದಿ
### ( ಜನವರಿ -ಫೆಬ್ರವರಿ) 2026)

**ಹಸಿರು ಭಾನುವಾರ :** ಅದಮ್ಯ ಚೇತನದ ಹಸಿರು ಭಾನುವಾರದ ಯೋಜನೆಯಡಿ, 526 ರಿಂದ 530ನೇ ಭಾನುವಾರಗಳವರೆಗೆ ವಿವಿಧ ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದವು. 526, 527, 528, ಮತ್ತು 529 ಹಸಿರು ಭಾನುವಾರಗಳನ್ನು ಕ್ರಮವಾಗಿ, ಕಗ್ಗಲಿಪುರ ಉತ್ತರಿ ಶಂಕರ ಮಠದ ಆವರಣ, ಬಸವನಗುಡಿಯ ಜಾಮಿಯಾ ಮಸೀದಿ ಹತ್ತಿರದ ಖಾಜಿ ಸ್ಟ್ರೀಟ್ ಆವರಣ, ಗಂಗಾನಗರದ, ಸ್ಪೈಸ್ ಗ್ಯಾಲರಿ ಆವರಣ, ಬಿಳೇಕಹಳ್ಳಿಯ ದಿವ್ಯ ಸಪ್ತಮಿ ಅಪಾರ್ಟ್‌ಮೆಂಟ್ ಆವರಣದಲ್ಲಿ ನಡೆಯಿತು. ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಯುತ್ ಫಾರ್ ಸೇವಾ ಸಂಸ್ಥೆಯ ಕಾರ್ಯಕರ್ತರು, ಹಸಿರು ಯೋಧರು ಮೊದಲಾದವರು ಭಾಗವಹಿಸಿದ್ದರು.

## ನಲ್ವತ್ತು ನಿಮಿಷದಲ್ಲಿ ನಲ್ವತ್ತು ಸಾವಿರ ಜನರ ರುಚಿ ಶುಚಿ ಊಟ



ದಿನಾಂಕ 31-01-2026 ರಂದು ವೇದಾಂತ ಭಾರತಿ ವತಿಯಿಂದ ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಲಾಗಿದ್ದ 'ವಿವೇಕ ದೀಪ್ತಿ' - ದಕ್ಷಿಣಾಮೂರ್ತ್ಯಷ್ಟಕಂ ಮಹಾಸಮರ್ಪಣೆ ಬೃಹತ್ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸುಮಾರು 40,000ಕ್ಕೂ ಅಧಿಕ ಭಕ್ತಾದಿಗಳಿಗೆ ಪ್ರಸಾದದ ವ್ಯವಸ್ಥೆ ಮಾಡುವ ಸೌಭಾಗ್ಯ 'ಅದಮ್ಯ ಚೇತನ' ಸಂಸ್ಥೆಯದ್ದಾಗಿತ್ತು.

ಈ ಬೃಹತ್ ಕಾರ್ಯಕ್ರಮದ ಯಶಸ್ಸಿಗಾಗಿ ಅದಮ್ಯ ಚೇತನದ ಸ್ವಯಂಸೇವಕರು ಅತ್ಯಂತ ಸಂಭ್ರಮ ಮತ್ತು ಧನ್ಯತಾಭಾವದಿಂದ ಸೇವೆ ಸಲ್ಲಿಸಿದರು. ತರಕಾರಿ ಕತ್ತರಿಸುವುದು ಹಾಗೂ ಅಡುಗೆಯ ಪೂರ್ವಸಿದ್ಧತೆಗಳಲ್ಲಿ ಉತ್ಸಾಹದಿಂದ ತೊಡಗಿಸಿಕೊಳ್ಳುವ ಮೂಲಕ ಕಾರ್ಯಕ್ರಮಕ್ಕೆ ನೆರವಾದರು.

ಕಾರ್ಯಕ್ರಮದಲ್ಲಿ ಭಾಗಿಯಾದ 40,000ಕ್ಕೂ ಹೆಚ್ಚು ಭಕ್ತರಿಗೆ ಅತ್ಯಂತ ರುಚಿಕರವಾದ ಮತ್ತು ಶುಚಿಯಾದ ಭೋಜನವನ್ನು ಅದಮ್ಯ ಚೇತನ ವತಿಯಿಂದ ಕಲ್ಪಿಸಲಾಯಿತು. ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಖುದ್ದಾಗಿ ಮೈದಾನವನ್ನು ಎರಡು ಬಾರಿ ಕಾಲ್ನಡಿಗೆಯಲ್ಲಿ ಸುತ್ತುವ ಮೂಲಕ ಊಟದ ವ್ಯವಸ್ಥೆಯನ್ನು ಪರಿಶೀಲಿಸಿದರು. ಭಕ್ತಾದಿಗಳಿಗೆ ಯಾವುದೇ ತೊಂದರೆಯಾಗದಂತೆ ಸುಗಮವಾಗಿ ಪ್ರಸಾದ ವಿನಿಯೋಗ ನಡೆಯುವಂತೆ ನೋಡಿಕೊಳ್ಳುವ ಮೂಲಕ ಇಡೀ ವ್ಯವಸ್ಥೆಯ ಉಸ್ತುವಾರಿ ವಹಿಸಿದ್ದರು. ಒಟ್ಟಾರೆಯಾಗಿ, ಅಧ್ಯಾತ್ಮ ಮತ್ತು ಸಮಾಜ ಸೇವೆಯ ಸಂಗಮದಂತಿದ್ದ ಈ ಕಾರ್ಯಕ್ರಮದಲ್ಲಿ ಅದಮ್ಯ ಚೇತನದ ಸೇವೆ ಹಾಗೂ ಶಿಸ್ತುಬದ್ಧ ವ್ಯವಸ್ಥೆಯು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಅನಂತಪಥ

Published by: Tejaswini Ananthkumar
Inputs : Nagesh Hegade | T S Gopal | Poornaprajna| Trivikram Joshi
ACknowldegements: Nayana S
For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

ಅದಮ್ಯ ಚೇತನ
ADAMYA CHETANA
Smt. Girija Shastry Memorial Trust (R.)
Anna | Akshara | Aarogya

# ಅನಂತ ಪ್ಲೇಟ್ ಬ್ಯಾಂಕ್: ಅದಮ್ಯ ಚೇತನದ ನಿಶುಲ್ಕ ಸೇವೆ

## ತ್ಯಾಜ್ಯ ಕಡಿಮೆಗೊಳಿಸೋಣ - ಬದುಕನ್ನು ಹಸನಾಗಿಸೋಣ

ಘನ ತ್ಯಾಜ್ಯವನ್ನು ಸಂಪೂರ್ಣವಾಗಿ ತಡೆಯುವ, ಅದಮ್ಯ ಚೇತನದ ಪ್ರಯತ್ನದಲ್ಲಿ ತಾವು ಕೈಜೋಡಿಸಿ ನಿಮ್ಮ ಕಾರ್ಯಕ್ರಮಗಳಿಗೆ ನಮ್ಮ ಅನಂತ ಪ್ಲೇಟ್ ಬ್ಯಾಂಕ್‌ನ ವಸ್ತುಗಳನ್ನು ಪಡೆಯುತ್ತಿರುವುದು ತುಂಬಾ ಸಂತೋಷದ ವಿಷಯ. ಸಮಾರಂಭಗಳಲ್ಲಿ ಬಳಸುವ ಪ್ಲಾಸ್ಟಿಕ್ ತಟ್ಟೆ, ಲೋಟಗಳಿಂದ ಇತರೇ ಜೀವಿಗಳಿಗೆ ತೊಂದರೆ, ಗಿಡಗಳ ನಾಶ, ಕಸದ ಪ್ರಮಾಣ ಹೆಚ್ಚಳವಾಗುತ್ತಿದೆ. ಆದುದರಿಂದ ನಿಮ್ಮೆಲ್ಲ ಕಾರ್ಯಕ್ರಮಗಳಲ್ಲಿ ಪರಿಸರಸ್ನೇಹಿ ವಸ್ತುಗಳನ್ನು ಬಳಸಿ ಹಾಗೂ ನಿಮ್ಮ ಬಂಧು ಮಿತ್ರರು, ಸ್ನೇಹಿತರೂ ಈ ಪರಿಸರಸ್ನೇಹಿ ವಸ್ತುಗಳನ್ನು ಉಪಯೋಗಿಸಲು ಪ್ರೇರೇಪಿಸಿ. ಒಮ್ಮೆ ಮಾತ್ರ ಬಳಸಿ ಬಿಸಾಡುವ ಪ್ಲೇಟ್, ಲೋಟ, ಬಾಟಲಿ, ಚಮಚಗಳನ್ನು ಉಪಯೋಗಿಸಿ ಕಸವನ್ನು ಹೆಚ್ಚಿಸುವುದು ಬೇಡ. ಪ್ಲಾಸ್ಟಿಕ್ ಅಷ್ಟೇ ಅಲ್ಲ ಅಡುಕೆತಟ್ಟೆ, ಕಾಗದದ ಲೋಟ ಸಹ ಬಳಸುವದು ಬೇಡ. ನಮ್ಮ ಆರೋಗ್ಯಕ್ಕೆ ಸಹ ಈ ತಟ್ಟೆ ಲೋಟಗಳು ಅಪಾಯಕಾರಿ.

ಬನ್ನಿ, ಕಾರ್ಯಕ್ರಮಗಳನ್ನು ಪರಿಸರ ಸ್ನೇಹಿಯಾಗಿಸೋಣ.

### ಅನಂತ ಪ್ಲೇಟ್‌ಬ್ಯಾಂಕ್ ವಸ್ತುಗಳನ್ನು ಪಡೆಯಲು ನಿಯಮಗಳು

1. ಪ್ಲೇಟ್‌ಬ್ಯಾಂಕ್‌ನಲ್ಲಿರುವ ತಟ್ಟೆ, ಲೋಟ, ಚಮಚ, ಕಠೋರಿ ಇತ್ಯಾದಿ ವಸ್ತುಗಳನ್ನು ನಿಶುಲ್ಕವಾಗಿ ನೀಡುತ್ತೇವೆ. ಯಾವುದೇ ಬಾಡಿಗೆ ಇಲ್ಲ. ಪಡೆದುಕೊಂಡಿರುವ ವಸ್ತುಗಳ ಒಟ್ಟು ಮೌಲ್ಯದ 10% ಹಣವನ್ನು ಫೋನ್-ಪೇ/ಯುಪಿಐ ಮೂಲಕ ಹಾಗೂ 90% ಹಣವನ್ನು ಚೆಕ್ ಮೂಲಕ ಡೆಪಾಸಿಟ್ ಇಡಬೇಕು. ನಗದು (CASH) ಮೂಲಕ ನೀಡುವಂತಿಲ್ಲ. ನಗದು ವ್ಯವಹಾರ ಸಂಪೂರ್ಣವಾಗಿ ನಿಲ್ಲಿಸಲಾಗಿದೆ.
2. ನಿಗದಿತ ದಿನದಂದು ಬಂದು, ‘ಇಶ್ಯೂ ಫಾರ್ಮ್’ (Issue Form) ಭರ್ತಿ ಮಾಡುವುದು ಕಡ್ಡಾಯ. ವಸ್ತುಗಳನ್ನು ಪಡೆಯುವಾಗ ಅವುಗಳ ಒಟ್ಟು ತೂಕವನ್ನು ನಮೂದಿಸಬೇಕು. ವಸ್ತುಗಳನ್ನು ಮರಳಿ ನೀಡುವಾಗ ತೂಕವನ್ನು ಪುನಃ ಪರಿಶೀಲಿಸಲಾಗುವುದು.
3. ಸಂಸ್ಥೆಯಲ್ಲಿ ಕೆಲಸದ ಒತ್ತಡ ಜಾಸ್ತಿ ಇರುವುದರಿಂದ ಪ್ಲೇಟ್‌ಬ್ಯಾಂಕ್ ವಸ್ತುಗಳನ್ನು ತೆಗೆದುಕೊಂಡು ಹೋಗಲು/ಮರಳಿ ಬಂದ ಮೇಲೆ ಎಣಿಸಲು ಮತ್ತು ತೂಕ ಮಾಡಲು ಸಹಾಯಕ್ಕೆ ಕಾರ್ಯಕರ್ತರನ್ನು ನೀವು ಕರೆದುಕೊಂಡು ಬರುವುದು.
4. ತೆಗೆದುಕೊಂಡು ಹೋದ ವಸ್ತುಗಳನ್ನು ತೊಳೆದು ಒರೆಸಿ, ಒಣಗಿಸಿ ಹಿಂತಿರುಗಿಸುವುದು.
5. ವಸ್ತುಗಳ ಮೇಲೆ ಗೀರುಗಳು (Scratches) ಬೀಳದಂತೆ ಜಾಗ್ರತೆ ವಹಿಸಿ. ತಟ್ಟೆ-ಲೋಟಗಳನ್ನು ತೊಳೆಯಲು ದಯವಿಟ್ಟು ಸ್ಟೀಲ್ ನಾರು (Steel Scrubber) ಬಳಸಬೇಡಿ. ಬದಲಿಗೆ ಕೇವಲ ಸ್ಪಾಂಜ್ ಬಳಸಿ ಸ್ವಚ್ಛಗೊಳಿಸಿ.
6.ತೊಳೆದ ಲೋಟ ಅಥವಾ ಬೌಲ್‌ಗಳನ್ನು ಒಂದರ ಒಳಗೊಂದು (Stack) ಹಾಕಬೇಡಿ. ಹೀಗೆ ಮಾಡುವುದರಿಂದ ಅವುಗಳ ಮೇಲೆ ಗೀರುಗಳು ಬೀಳುವ ಸಾಧ್ಯತೆ ಇರುತ್ತದೆ.
7. ಪ್ಲೇಟ್‌ಬ್ಯಾಂಕ್ ವಸ್ತುಗಳನ್ನು ಪಡೆಯಲು ಬರುವವರು ಒಂದು ವಾರ ಮುಂಚಿತವಾಗಿ ತಿಳಿಸಿ ಬುಕಿಂಗ್ ಟೋಕನ್ ಪಡೆಯುವದು. ಆನ್ಲೈನ್/ಫೋನ್ ಮೂಲಕ ಟೋಕನ್ ಪಡೆಯಬಹುದು.
8. ಪ್ಲೇಟ್‌ಬ್ಯಾಂಕ್ ವಸ್ತುಗಳನ್ನು ಕೊಡಲು ಮತ್ತು ವಾಪಾಸ್ ಪಡೆಯಲು ಸಮಯ ಮಧ್ಯಾಹ್ನ 2 ರಿಂದ 5 ಗಂಟೆಯವರೆಗೆ. ಸೋಮವಾರದಿಂದ ಶನಿವಾರದವರೆಗೆ ಮಾತ್ರ. ಭಾನುವಾರ ಇರುವುದಿಲ್ಲ.
9.ನಿಮ್ಮ ಸಮಾರಂಭದಲ್ಲಿ ‘ಅನಂತ ಪ್ಲೇಟ್‌ಬ್ಯಾಂಕ್‌ನ ನಾಮಫಲಕವನ್ನು ಪ್ರದರ್ಶಿಸಬೇಕೆಂದು ನಮ್ಮ ವಿನಂತಿ. ಇದರಿಂದ ಹೆಚ್ಚಿನ ಜನರಿಗೆ ನಮ್ಮ ಸಂಸ್ಥೆಯ ಉದ್ದೇಶ ತಿಳಿದು, ಅವರು ಕೂಡ ಕಸರಹಿತ ಕಾರ್ಯಕ್ರಮಗಳನ್ನು ಮಾಡಲು ಪ್ರೇರಣೆ ಸಿಗುತ್ತದೆ. ನಮ್ಮ ತಟ್ಟೆ-ಲೋಟಗಳನ್ನು ಬಳಸುತ್ತಿರುವ ಫೋಟೋ ಅಥವಾ ವಿಡಿಯೋಗಳನ್ನು ನಮಗೆ ಕಳುಹಿಸಿಕೊಡಿ. ಜೊತೆಗೆ, ತೆಗೆದ ಫೋಟೋಗಳನ್ನು ನಿಮ್ಮ ಇನ್‌ಸ್ಟಾಗ್ರಾಂ ಮತ್ತು ಫೇಸ್‌ಬುಕ್ ಖಾತೆಗಳಲ್ಲಿ ಹಂಚಿಕೊಂಡು ನಮ್ಮನ್ನು ಟ್ಯಾಗ್ ಮಾಡಿ. ಪರಿಸರ ಉಳಿಸುವ ಈ ಅಭಿಯಾನದಲ್ಲಿ ನೀವೂ ಭಾಗಿಯಾಗಿ.

10. ನಿಮ್ಮ ಕಾರ್ಯಕ್ರಮ ಸಾಧ್ಯವಷ್ಟು ಕಸರಹಿತ ವಾಗಿ ಮಾಡಲು ಪ್ರಯತ್ನಿಸಿ. ಆಹಾರ ಸಹ ಪೋಲಾಗದಂತೆ ಗಮನಿಸಿ. ಕುಡಿಯುವ ನೀರಿಗೆ ಪ್ಲಾಸ್ಟಿಕ್ ಬಾಟಲಿ ಬಳಸದೆ, 20 ಲೀಟರ್ ಕ್ಯಾನ್ ಅಥವಾ ಗಾಜಿನ ಬಾಟಲಿ ಬಳಸಿ.

11. ತೆಗೆದುಕೊಂಡ ಹೋದ ವಸ್ತು ಕಳೆದು ಹೋದರೆ, ಪಾತ್ರೆಗಳು ಸ್ವಚ್ಛವಾಗಿಲ್ಲದಿದ್ದರೆ ಒಂದು ವಸ್ತು/ಪಾತ್ರೆಗೆ 2 ರೂ.ರಂತೆ (ತಟ್ಟೆಗೆ 2ರೂ. ಉಳಿದ ವಸ್ತುಗಳಿಗೆ 1ರೂ.) ಹಾಗೂ ನಿಗದಿತ ದಿನಾಂಕದಂದು ಪ್ಲೇಟ್‌ಬ್ಯಾಂಕ್ ವಸ್ತುಗಳನ್ನು ವಾಪಾಸ್ ತರದಿದ್ದಲ್ಲಿ, ಕಾರ್ಯಕ್ರಮದಲ್ಲಿ ಅನಂತ ಪ್ಲೇಟ್‌ಬ್ಯಾಂಕ್ ಬೋರ್ಡ್ ಹಾಕದಿದ್ದಲ್ಲಿ , ಪ್ಲಾಸ್ಟಿಕ್ ಬಾಟಲಿ ಮತ್ತಿತರ ಕಸವಾಗುವ ವಸ್ತುಗಳನ್ನು ಬಳಸಿ ಕಸದ ಪ್ರಮಾಣ ಬೆಳೆಸಿದರೆ ಸೂಕ್ತವಾದ ಶುಲ್ಕವನ್ನು ನಿಮ್ಮ ಡೆಪಾಸಿಟ್ ಮೊತ್ತದಲ್ಲಿ ಕಡಿತಗೊಳಿಸಲಾಗುವುದು.

12. ತಾವು ತೆಗೆದುಕೊಂಡು ಹೋದ ಎಲ್ಲಾ ವಸ್ತುಗಳನ್ನು ಹಿಂತಿರುಗಿಸಿದ ಮೇಲೆ ತಾವು ನೀಡಿದ ಚೆಕ್ ಅನ್ನು ಅದೇ ದಿನ ಮತ್ತು ಬ್ಯಾಂಕ್ ಗೆ ಡೆಪಾಸಿಟ್ ಮಾಡಿದ ಹಣವನ್ನು 24 ಗಂಟೆಗಳಲ್ಲಿ ಹಿಂಪಡೆಯುವುದು.

# ಅದಮ್ಯ ಸೇವಾ

## ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಬೆಂಗಳೂರಿನ ಜೆ.ಪಿ. ನಗರದಲ್ಲಿ ಇತ್ತೀಚೆಗೆ ಜರುಗಿದ 'ಹಿಂದೂ ಸಮಾಜೋತ್ಸವ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು.



ಮುಂಬೈನ ಮಯೂರ ವರ್ಮಾ ಪ್ರತಿಷ್ಠಾನದಿಂದ ಆಯೋಜಿಸಲಾಗಿದ್ದ ವಾರ್ಷಿಕ ಸಮಾವೇಶದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ಪ್ರತಿಷ್ಠಿತ 'ಚಕ್ರಧಾರಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು.




ಅದಮ್ಯ ಚೇತನದಲ್ಲಿ ಗಣರಾಜ್ಯೋತ್ಸವದ ಸಡಗರ: ಜನವರಿ 26ರಂದು ನಡೆದ ಧ್ವಜಾರೋಹಣ ಕಾರ್ಯಕ್ರಮದ ಒಂದು ಚಿತ್ರ.



ಪ್ಲಾಸ್ಟಿಕ್ ಮುಕ್ತ ಪರಿಸರ ನಿರ್ಮಿಸುವ ಮಹತ್ವಾಕಾಂಕ್ಷೆಯೊಂದಿಗೆ ಡಾ. ಶಿವಕುಮಾರ್ ಅವರ ನೇತೃತ್ವದಲ್ಲಿ ಗಂಗಾವತಿಯಲ್ಲಿ ಆರಂಭವಾಗಿರುವ 'ಅನಂತ ಪ್ಲೇಟ್ ಬ್ಯಾಂಕ್' ಗೆ ಶ್ರೀ ಗಂಗಾವತಿ ಪ್ರಾಣೇಶ್ ಅವರು ಭೇಟಿ ನೀಡಿ, ಈ ಜನಪರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.



ಊಟ ಫ್ರಮ್ ತೋಟ': ಅದಮ್ಯ ಚೇತನ ಮತ್ತು ಗಾರ್ಡನ್ ಸಿಟಿ ಫಾರ್ಮರ್ಸ್ ಸಹಯೋಗದಲ್ಲಿ 50ನೇ ಕಾರ್ಯಕ್ರಮ ಯಶಸ್ವಿ.



ಶೂನ್ಯ ತ್ಯಾಜ್ಯ ಸಂಕಲ್ಪ: ಶಿವರಾತ್ರಿ ಪ್ರಯುಕ್ತ ಭಕ್ತರಿಗೆ ಸ್ಟೀಲ್ ಲೋಟಗಳಲ್ಲಿ ಮಜ್ಜಿಗೆ ಪ್ರಸಾದ ವಿತರಿಸಿದ ಅದಮ್ಯ ಚೇತನದ ಕಾರ್ಯಕರ್ತರು.




529ನೇ ಹಸಿರು ಭಾನುವಾರ: ಅದಮ್ಯ ಚೇತನ ಹಾಗೂ ಸೇವಾ ಬ್ರಿಗೇಡ್ ಫೌಂಡೇಶನ್ ವತಿಯಿಂದ ಬಿಳೇಕಹಳ್ಳಿಯ ದಿವ್ಯ ಸಪ್ತಮಿ ಅಪಾರ್ಟ್‌ಮೆಂಟ್ ಆವರಣದಲ್ಲಿ ನಡೆದ ಪರಿಸರ ಸಂರಕ್ಷಣಾ ಕಾರ್ಯಕ್ರಮ.



ಅದಮ್ಯ ಚೇತನಕ್ಕೆ ಶೈಕ್ಷಣಿಕ ಭೇಟಿ: ಚಿಕ್ಕಬಳ್ಳಾಪುರದ ನಾಗಾರ್ಜುನ ಮ್ಯಾನೇಜ್‌ಮೆಂಟ್ ಸ್ಟಡೀಸ್ ಕಾಲೇಜಿನ ವಿದ್ಯಾರ್ಥಿ ಹಾಗೂ ಉಪನ್ಯಾಸಕರಿಂದ ಸಂಸ್ಥೆಯ ಕಾರ್ಯವೈಖರಿ ವೀಕ್ಷಣೆ.